₹ 4 | ಪುಟ: 4 | ಸಂಪುಟ: 4 | ಸಂಚಿಕೆ 57 | newsbelagavi@gmail.com | 9900332089 | 9900332089



# ಬೆಳಗಾವಿ ವರದಿ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ
BELAGAVI VARADI KANNADA DAILY
ಕನ್ನಡ ದಿನಪತ್ರಿಕೆ
Volume : 4 | Issue: 57 | Saturday, 15, APRIL, 2023 | RNI: KARKAN/2020/79084 | Regn,No:G-2/PMG/KA/NK/BM/139/2021-23 | 24

## ಮೀಸಲಾತಿ: ಬಿಜೆಪಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ



ಮೀಸಲಾತಿ ಘೋಷಣೆ ಕೇವಲ ರಾಜಕೀಯ ಗಿಮಿಕ್ ಅಷ್ಟೆ ಎಂದು ರಾಜ್ಯ ಸರ್ಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸಿದೆ.ಮೀಸಲಾತಿ ವಿಚಾರ ಪ್ರಸ್ತಾಪಿಸಿ ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, 'ಸಿಎಂ ಬಸವರಾಜ ಬೊಮ್ಮಾಯಿ ಅವರೇ, ನಿಮ್ಮ 'ಮೀಸಲಾತಿ ಗಿಮಿಕ್' ಅನುಷ್ಠಾನ ಮಾಡುವುದು ಅಸಾಧ್ಯ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಜನತೆಗೆ ಈಗ ನಿಮ್ಮ ಉತ್ತರವೇನು, ಸಾಬೂಬುಗಳೇನು' ಎಂದು ಪ್ರಶ್ನಿಸಿದೆ.

'ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್‌ರವರ ಜಯಂತಿ ಸಂದರ್ಭದಲ್ಲಿ ಸಂವಿಧಾನದ ಆಶಯವನ್ನು ಸುಪ್ರೀಂ ಎತ್ತಿ ಹಿಡಿದಿದೆ. ಬಿಜೆಪಿಯ ಸಂವಿಧಾನ ವಿರೋಧಿ ನೀತಿಯನ್ನು ಬೆತ್ತಲುಗೊಳಿಸಿದೆ' ಎಂದು ಕಾಂಗ್ರೆಸ್ ಟೀಕಿಸಿದೆ

ಅಧ್ಯಯನವಿಲ್ಲದೆ ಚುನಾವಣೆ ಗಿಮಿಕ್‌ಗಾಗಿ ಮುಸ್ಲಿಂ ಮೀಸಲಾತಿಯನ್ನು ಕಿತ್ತು ಮೂಗಿಗೆ ತುಪ್ಪ ಸವರುವ ನಿರ್ಧಾರ ದೋಷಪೂರಿತ ಎಂದು ಸುಪ್ರೀಂ ಕೋರ್ಟ್ ಹೇಳಿರುವುದು ರಾಜ್ಯದ ಬಿಜೆಪಿ ಸರ್ಕಾರದ ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿ. 'ಅನುಷ್ಠಾನ ಅಸಾಧ್ಯ' ಎಂಬುದು ಸುಪ್ರೀಂ ಹೇಳುವ ಮೂಲಕ ಬಿಜೆಪಿಯ ಕಿವಿ ಮೇಲೆ ಹೂವು ಇಡುವ ಪ್ರಯತ್ನವನ್ನು ಬಯಲುಗೊಳಿಸಿದೆ' ಎಂದು ಕಾಂಗ್ರೆಸ್ ಟೀಕಿಸಿದೆ.

# ಮಾಜಿ ಡಿಸಿಎಂ ಲಕ್ಷ್ಮಣ ಸವದಿ ಕಾಂಗ್ರೆಸ್ ತೆಕ್ಕೆಗೆ

ಬೆಂಗಳೂರು: ಹಿರಿಯ ಬಿಜೆಪಿ ನಾಯಕ, ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಪಕ್ಷದ ಧ್ವಜ ನೀಡುವ ಮೂಲಕ ಸವದಿ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಇವರ ಜತೆಗೆ ಮಾಜಿ ಸಚಿವ ಶಶಿಕಾಂತ ನಾಯ್ಕ್ ಅವರೂ ಪಕ್ಷ ಸೇ–ರಿದರು.

ನಂತರ ಮಾತನಾಡಿದ ಡಿ.ಕೆ.ಶಿವಕುಮಾರ್, ಇದೊಂದು ಐತಿಹಾಸಿಕ ದಿನ. ರಾಷ್ಟ್ರ ಹಾಗೂ ರಾಜ್ಯ ರಾಜಕಾರಣದಲ್ಲಿ ಈ ದಿನವನ್ನು ಬಹಳ ಸೂಕ್ಷ್ಮವಾಗಿ ನೋಡಲಾಗುತ್ತಿದೆ. ಇಡೀ ರಾಜ್ಯದಲ್ಲಿ 63 ಕ್ಷೇತ್ರಗಳಲ್ಲಿ ಬಿಜೆಪಿ ನಾಯಕರು ವಲಸೆ ಹೋಗುತ್ತಿದ್ದಾರೆ. 90% ರಷ್ಟು ನಾಯಕರು ಕಾಂಗ್ರೆಸ್ ಪಕ್ಷ ಸೇರುತ್ತಿದ್ದು, ಕೆಲವರು ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದು, ಮತ್ತೇ ಕೆಲವರು ಜೆಡಿಎಸ್ ಸೇರುತ್ತಿದ್ದಾರೆ ಎಂದರು.

ಇನ್ನು 5 ವರ್ಷಗಳ ಕಾಲ ವಿಧಾನ ಪರಿಷತ್ ಅಧಿಕಾರವಿದ್ದರೂ ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರು ಕಾಂಗ್ರೆಸ್ ಪಕ್ಷ ಸೇರುತ್ತಿದ್ದಾರೆ. ಅವರು ಈ ಹಿಂದೆ ಸಹಕಾರ, ಸಾರಿಗೆ ಸಚಿವರಾಗಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಪ್ರಭಾವಿ ನಾಯಕರಾಗಿದ್ದಾರೆ. ಅವರು ಚುನಾವಣೆಯಲ್ಲಿ ಸೋತಾಗಲೂ ಅವರನ್ನು ಉಪಮುಖ್ಯಮಂತ್ರಿ ಮಾಡಲಾಗಿತ್ತು. ಆಪರೇಷನ್ ಕಮಲ ಮಾಡಿದಾಗ ಮುಂದೆ ತಮಗೆ ಟಿಕೆಟ್ ನೀಡುವುದಾಗಿ ಬಿಜೆಪಿ ನಾಯಕರು ಇವರಿಗೆ ಮಾತು ಕೊಟ್ಟಿದ್ದರು. ಆದರೆ ನುಡಿದಂತೆ ನಡೆಯಲಿಲ್ಲ. ಹೀಗಾಗಿ ಬೇಸತ್ತು ಅವರು ಬಿಜೆಪಿ ತೊರೆದು ಕಾಂಗ್ರೆಸ್ ಸೇರುತ್ತಿದ್ದಾರೆ ಎಂದು ಹೇಳಿದರು.

ಅವರು ತಮ್ಮ ಕ್ಷೇತ್ರ ಹಾಗೂ ಜಿಲ್ಲೆಯ ಅಭಿವೃದ್ಧಿ ಬಗ್ಗೆ ನಮ್ಮ ಜತೆ ಚರ್ಚೆ ಮಾಡಿ, ಯಾವುದೇ ಷರತ್ತು ಇಲ್ಲದೇ ಪಕ್ಷ



ಸೇರುತ್ತಿದ್ದಾರೆ. ರಾಜ್ಯದ ಎಲ್ಲ ನಾಯಕರು ಕಾರ್ಯಕರ್ತರ ಪರವಾಗಿ ಸವದಿ ಅವರನ್ನು ತುಂಬು ಹೃದಯದಿಂದ ಪಕ್ಷಕ್ಕೆ ಸ್ವಾಗತಿಸುತ್ತೇನೆ. ಇಂದು ಪಕ್ಷದ ಪ್ರಧಾನ ಕಾರ್ಯದರ್ಶಿ, ಶಾಸಕಾಂಗ ಪಕ್ಷದ ನಾಯಕರ ಜತೆ ಸಭೆ ಮಾಡಿ ಈ ತೀರ್ಮಾನ ತೆಗೆದುಕೊಂಡಿದ್ದೇವೆ. ಬೆಳಗಾವಿಯಲ್ಲಿ ಕಾರ್ಯಕ್ರಮ ಇರುವುದರಿಂದ ಸಿದ್ದರಾಮಯ್ಯ, ಸತೀಶ್ ಜಾರಕಿಹೊಳಿ ಹಾಗೂ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಎಂದು ಸ್ಪಷ್ಟನೆ ನೀಡಿದರು.

ಅಂಬೇಡ್ಕರ್ ಅವರು ಜನಿಸಿದ ದಿನ ಈ ಶುಭ ದಿನ, ಶುಭ ಗಳಿಗೆಯಲ್ಲಿ ನಾವು ಸವದಿ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುತ್ತಿದ್ದೇವೆ ಎಂದರು.

**ಬಿಜೆಪಿ ಪಕ್ಷ ಕುಸಿಯುತ್ತಿದೆ:ಸುರ್ಜೇವಾಲ**

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಮಾತನಾಡಿ ಭಾರತದ ರಾಜಕೀಯದಲ್ಲಿ ಅನೇಕ ವಿಚಾರವಾಗಿ ಇಂದಿನ ದಿನ ಐತಿಹಾಸಿಕ ದಿನವಾಗಿದೆ. ಉತ್ತಮ ಕರ್ನಾಟಕ ನಿರ್ಮಾಣ, ಕರ್ನಾಟಕದ ಬ್ರ್ಯಾಂಡ್ ಮರುಸ್ಥಾಪನೆ ಹಾಗೂ ರಾಜ್ಯದಲ್ಲಿ ಹೊಸ ಅಧ್ಯಾಯ ಬರೆಯುವ ದಿನ ಇದಾಗಿದೆ. ಇಂದು ಹೊಸ ಆರಂಭದ ದಿನ. ಲಕ್ಷ್ಮಣ ಸವದಿ ಅವರು ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದು, ಅವರು ತಮ್ಮದೇ ಆದ ರೀತಿಯಲ್ಲಿ ರಾಜ್ಯಕ್ಕೆ ಕೊಡುಗೆ ನೀಡಿದ್ದಾರೆ. ಇನ್ನು ಹಿರಿಯ ಮಾಜಿ ಮಂತ್ರಿಗಳಾದ ಶಶಿಕಾಂತ್ ಅವರು ಕೂಡ ರೈತರು, ಬಡವರು, ಅಭಿವೃದ್ಧಿ ವಿಚಾರವಾಗಿ ಸಮಾಜ ದಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ ಎಂದು ಹೇಳಿದರು.

ನಾವು ರಾಜ–ಕೀಯವಾಗಿ ಇಷ್ಟು ದಿನ ಎದುರಾಳಿಗಳಿದ್ದವು. ಸೈದ್ಧಾಂತಿಕವಾಗಿ ಭಿನ್ನಾಭಿಪ್ರಾಯ ಹೊಂದಿದ್ದೆವು. ಆದರೆ ಇಂದು ಸವದಿ ಅವರು ಹೊಸ ನಂಬಿಕೆಯೊಂದಿಗೆ ತಮ್ಮ ಲಕ್ಷಾಂತರ ಕಾರ್ಯಕರ್ತರ ಜತೆ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಶಿವಕುಮಾರ್, ಸಿದ್ದಾರಾಮಯ್ಯ ಅವರ ನಾಯಕತ್ವದಲ್ಲಿ ನಂಬಿಕೆ ಇಟ್ಟು ಕಾಂಗ್ರೆಸ್ ಸೇರುವ ತೀರ್ಮಾನ ಮಾಡಿದ್ದಾರೆ. ಸವದಿ ಅವರು ರಾಜ್ಯದ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಈ ಧೈರ್ಯದ ತೀರ್ಮಾನ ತೆಗೆದುಕೊಂಡಿದ್ದು, ಪಕ್ಷದ ಎಲ್ಲಾ ನಾಯಕರ ಪರವಾಗಿ ಪಕ್ಷಕ್ಕೆ ಸ್ವಾಗತಿಸುತ್ತೇನೆ ಎಂದರು.

ಬಿಜೆಪಿ ಪಕ್ಷ ಕುಸಿಯುತ್ತಿದೆ. ಆ ಪಕ್ಷವನ್ನು ಕಟ್ಟಿದವರನ್ನು ಮೂಲೆಗುಂಪು ಮಾಡಲಾಗುತ್ತಿದೆ. ಸವದಿ ಅವರಿಂದ ಈಶ್ವರಪ್ಪ, ನೆಹರೂ ಓಲೇಕರ್, ಲಿಂಗಣ್ಣ, ಎಂ.ಪಿ ಕುಮಾರಸ್ವಾಮಿ, ರಘುಪತಿ ಭಟ್, ಪುಟ್ಟಣ್ಣ, ನಾಗೇಶ್, ಅಂಗಾರ, ಬೆಟ್ಟಸ್ವಾಮಿ, ಅನಿಲ್ ಬೆನಕೆ, ಮಹದೇವಪ್ಪ, ಗೂಳಿಹಟ್ಟಿ ಶೇಖರ್, ಯು.ಬಿ ಬಣಕಾರ್, ಆರ್. ಶಂಕರ್ ಸೇರಿದಂತೆ ಅನೇಕ ನಾಯಕರನ್ನು ಮೂಲೆಗುಂಪು ಮಾಡಲು ಮುಂದಾಗಿದೆ. ಯಾವ ಕುಟುಂಬ ತಮ್ಮ ಮನೆಯ ಹಿರಿಯರನ್ನು ಗೌರವಿಸುವುದಿಲ್ಲವೋ ಆ ಕುಟುಂಬ ಹೆಚ್ಚು ದಿನ ಉಳಿಯುವುದಿಲ್ಲ. ಅದೇ ರೀತಿ ಪಕ್ಷ ಕಟ್ಟಿದವರನ್ನು ಮೂಲೆಗುಂಪು ಮಾಡಿದರೆ ಪಕ್ಷ ಉಳಿಯುವುದಿಲ್ಲ. ಅದೇ ಕಾರಣಕ್ಕೆ ಬಿಜೆಪಿ ಇಂದು ಕುಸಿಯುತ್ತಿದೆ. 40% ಕಮಿಷನ್ ಸರ್ಕಾರ ಈ ಬಾರಿ 40ಕ್ಕೂ ಕಡಿಮೆ ಕ್ಷೇತ್ರಗಳನ್ನು ಗೆಲ್ಲಲಿದೆ. ಈ ನಾಯಕರು, ಅಧಿಕಾರಕ್ಕಾಗಿ ಪಕ್ಷ ಸೇರುತ್ತಿಲ್ಲ. ಅವರು ಅವರ ಕ್ಷೇತ್ರ ಹಾಗೂ ಜಿಲ್ಲೆಯ ಅಭಿವೃದ್ಧಿ, ಕರ್ನಾಟಕ ಬ್ರ್ಯಾಂಡ್ ಪುನರ್ ಸ್ಥಾಪನೆಗೆ ಈ ತೀರ್ಮಾನ ಮಾಡಿದ್ದಾರೆ.ಎಂದರು.

ಬೆಳಗಾವಿಯಲ್ಲಿ ರಾಜ್ಯದ ಗಡಿ ಅಪಾಯದಲ್ಲಿದೆ, ರಾಜ್ಯದ ಸ್ವಾಭಿಮಾನದ ಹೆಮ್ಮೆಯ ನಂದಿನಿ ಬ್ರ್ಯಾಂಡ್ ಮೇಲೆ ದಾಳಿ ನಡೆಯುತ್ತಿದೆ ಇದೆಲ್ಲದರ ವಿರುದ್ಧ ಅವರು ಹೋರಾಟ ಮಾಡುತ್ತಿದ್ದಾರೆ. ಅದೇ ಹೋರಾಟ ನಮ್ಮದಾಗಿದ್ದು, ಈ ಹೋರಾಟ ಕರ್ನಾಟಕ ರಾಜ್ಯ ಹಾಗೂ ಕನ್ನಡ ಭಾಷೆಯ ಅಸ್ಮಿತೆ ಹಾಗೂ ಸ್ವಾಭಿಮಾನದ ರಕ್ಷಣೆಗಾಗಿ ನಡೆಯುತ್ತಿದೆ. ಈ ಕಾರಣಕ್ಕೆ ನಾವು ಇಂದು ಒಂದುಗೂಡುತ್ತಿದ್ದೇವೆ. ಅವರನ್ನು ಮುಕ್ತ ಮನಸ್ಸಿನಿಂದ ಪಕ್ಷಕ್ಕೆ ಸೇರಿಸಿಕೊಳ್ಳುತ್ತಿದ್ದೇವೆ.

ಸವದಿ ಅವರು ನಮ್ಮ ಕುಟುಂಬದ ಪ್ರಮುಖ ಸದಸ್ಯರಾಗಿ ನಮ್ಮ ಮನದಲ್ಲಿ ವಿಶೇಷ ಸ್ಥಾನ ಪಡೆಯಲಿದ್ದೀರಿ. ನಿಮ್ಮ ಸಾರ್ವಜನಿಕ ಜೀವನದ ಅನುಭವವನ್ನು ಕಾಂಗ್ರೆಸ್ ಪಕ್ಷ ಬಳಸಿಕೊಳ್ಳಲಿದೆ ಎಂದು ಹೇಳಿದರು.

**ಬಿಜೆಪಿಯಲ್ಲಿ ಅಪಮಾನ: ಲಕ್ಷ್ಮಣ ಸವದಿ**

ಇಂದು ಕಾಂಗ್ರೆಸ್ ಸದಸ್ಯತ್ವ ಪಡೆದು, ಪಕ್ಷ ಸೇರುತ್ತಿದ್ದೇನೆ. ಇಂದು ಭಾರತ ದೇಶದ ಸಂವಿಧಾನ ಶಿಲ್ಪಿ, ಭಾರತ ರತ್ನ, ಬಿ.ಆರ್ ಅಂಬೇಡ್ಕರ್ ಅವರ ಜನ್ಮದಿನ. ದೇಶಕ್ಕೆ ಸಂವಿಧಾನ ಕೊಟ್ಟವರ ಜನ್ಮದಿನದಂದು ಕಾಂಗ್ರೆಸ್ ಸೇರುತ್ತಿದ್ದು, ಮುಂದಿನ ದಿನಗಳಲ್ಲಿ ಅಂಬೇಡ್ಕರ್ ಅವರ ಪ್ರೇರಣೆ ಸಿಗಲೆಂದು ಪ್ರಾರ್ಥಿಸುತ್ತೇನೆ. ಸುಮಾರು 25 ವರ್ಷಗಳಿಂದ ಬಿಜೆಪಿ ಕಾರ್ಯಕರ್ತನಾಗಿ ಅನೇಕ ಹುದ್ದೆ ನಿಭಾಯಿಸಿ, ಆ ಪಕ್ಷ ಬಿಟ್ಟು ಕಾಂಗ್ರೆಸ್ ಸೇರುತ್ತಿರುವುದರ ಬಗ್ಗೆ ಕೆಲವರಿಗೆ ಪ್ರಶ್ನೆ ಇರಬಹುದು.



ಸವದಿ ಎಲ್ಲಿ ಇರುತ್ತಾನೋ ನಿಷ್ಠೆ ಅಲ್ಲಿರುತ್ತದೆ. ನನಗೆ ಹೊಂದಾಣಿಕೆ ರಾಜ–ಕೀಯ ಗೊತ್ತಿಲ್ಲ. ನಾನು ಇರುವ ಪಕ್ಷದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ನನ್ನನ್ನು ಪಕ್ಷಕ್ಕೆ ಬರಮಾಡಿಕೊಂಡ ಎಲ್ಲ–ರಿಗೂ ಧನ್ಯವಾದ ಅರ್ಪಿಸುತ್ತೇನೆ.

## ಲಕ್ಷ್ಮಣ ಸವದಿ ಕಾಂಗ್ರೆಸ್ ಸೇರ್ಪಡೆಯಿಂದ ಕೈಗೆ ಬಲ: ಸತೀಶ್ ಜಾರಕಿಹೊಳಿ



ಬೆಳಗಾವಿ: ಮಾಜಿ ಡಿಸಿಎಂ ಲಕ್ಷ್ಮಣ ಸವದಿ ಕಾಂಗ್ರೆಸ್ ಸೇರ್ಪಡೆ ಆಗುತ್ತಿರುವುದರಿಂದ ಕಾಂಗ್ರೆಸ್ ಪಕ್ಷಕ್ಕೆ ಇನ್ನಷ್ಟು ಬಲ ಬಂದಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ್ ಜಾರಕಿಹೊಳಿ ಅವರು ಹೇಳಿದರು.

## ಸವದಿ ಕಾಂಗ್ರೆಸ್ ಸೇರ್ಪಡೆಗೆ ಬಹಳ ದುಃಖ ಆಗ್ತಿದೆ; ಉತ್ತಮ ಭವಿಷ್ಯ ಇತ್ತು: ಸಿಎಂ



ಬೆಂಗಳೂರು : ಲಕ್ಷ್ಮಣ್ ಸವದಿ ಕಾಂಗ್ರೆಸ್ ಸೇರ್ಪಡೆ ವಿಚಾರವಾಗಿ ಸಿಎಂ ಬಸವರಾಜ ಬೊಮ್ಮಾಯಿ ಮಾತನಾಡಿ, ನನಗೆ ಬಹಳ ದುಃಖ ಆಗ್ತಿದೆ, ಸವದಿಗೆ ಉತ್ತಮ ಭವಿಷ್ಯ ಇತ್ತು ಎಂದು ಪ್ರತಿಕ್ರಿಯಿದ್ದಾರೆ.

## ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಾರು ಪರಿಶೀಲನೆ ಮಾಡಿದ ಪೊಲೀಸರು



ಬೆಳ್ತಂಗಡಿ: ಚಾರ್ಮಾಡಿ ಚೆಕ್ ಪೋಸ್ಟ್ ನಲ್ಲಿ ಪೊಲೀಸರು ಹಾಗೂ ಚುನಾವಣಾ ಅಧಿಕಾರಿಗಳು ಕಟ್ಟು ನಿಟ್ಟಿನ ವಾಹನ ತಪಾಸಣೆ ನಡೆಸುತ್ತಿದ್ದು, ಗುರುವಾರ ಅಧಿಕಾರಿಗಳು ಸಂಸದ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲು ಮತ್ತು ಜಿಲ್ಲಾಧ್ಯಕ್ಷ ಸುದರ್ಶನ ಅವರ ಕಾರನ್ನು ತಡೆದು ತಪಾಸಣೆ ನಡೆಸಿದ್ದಾರೆ.

ಅಧಿಕಾರಿ ಜಯಕೀರ್ತಿ ಹೆಚ್.ಬಿ. ಅವ–ರಿದ್ದ ತಂಡವು ಬಿಜೆಪಿ ರಾಜ್ಯಾಧ್ಯಕ್ಷರು ಮತ್ತು ಜಿಲ್ಲಾಧ್ಯಕ್ಷರಿರುವ ಇನೋವಾ ಕಾರು ಹಾಗೂ ಐದು ಪೊಲೀಸ್ ಭದ್ರತಾ ವಾಹನದೊಂದಿಗೆ ಬೆಂಗಳೂ–ರಿನಿಂದ ಮಂಗಳೂರಿಗೆ ಚಾರ್ಮಾಡಿ ಘಾಟ್ ರಸ್ತೆ ಮೂಲಕ ಬರುತ್ತಿದ್ದಾಗ ಚಾರ್ಮಾಡಿ ಚೆಕ್ ಪೋಸ್ಟ್ ನಲ್ಲಿ ತಡೆದು ನಿಲ್ಲಿಸಿ ಕಾರು ಪರಿಶೀಲನೆ ನಡೆಸಿ ನಂತರ ಪ್ರಯಾಣಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಚಾರ್ಮಾಡಿ ಚೆಕ್ ಪೋಸ್ಟ್ ಮೂಲಕ ಚಿಕ್ಕಮಗಳೂರು ಜಿಲ್ಲೆಯ ವಾಹನಗಳು ದ.ಕ ಜಿಲ್ಲೆಗೆ ಪ್ರವೇಶಿಸುತ್ತಿದ್ದು, ಅಂತರ್ ಜಿಲ್ಲಾ ಚೆಕ್ ಪೋಸ್ಟ್ ಆಗಿರುವ ಇಲ್ಲಿ ಕಟ್ಟು ನಿಟ್ಟಿನ ವಾಹನ ತಪಾಸಣೆ ನಡೆಸಲಾಗುತ್ತಿದೆ.

## ಭೀಕರ ಅಪಘಾತ: 6 ಜನರ ಸಾವು



ದಕ್ಷಿಣ ಕನ್ನಡ : ಮಾಣಿ– ಮೈಸೂರು ರಾಷ್ಟ್ರೀಯ ಹೆದ್ದಾ–ರಿಯ ಸಂಪಾಜೆಯಲ್ಲಿ ಬಸ್ ಮತ್ತು ಕಾರು ನಡುವೆ ಉಂಟಾದ ಭೀಕರ ಅಪಘಾತದಲ್ಲಿ 6 ಮಂದಿ ಮೃತಪಟ್ಟಿರುವ ದುರ್ಘಟನೆ ನಡೆದಿದೆ. ಕಾರು ಮತ್ತು ಬಸ್ ನಡುವೆ ಸಂಪಾಜೆ ಪೆಟ್ರೋಲ್ ಪಂಪ್ ಬಳಿ ಅಪಘಾತ ನಡೆದಿದೆ. ಕಾರಿನಲ್ಲಿದ್ದವರು ಗಂಭೀರ ಗಾಯಗೊಂಡಿದ್ದು, ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿರುವುದಾಗಿ ತಿಳಿದುಬಂದಿದೆ.

3 ಮಕ್ಕಳು, ಇಬ್ಬರು ಮಹಿಳೆಯರು ಹಾಗೂ ಓರ್ವ ಪುರುಷ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಮೃತಪಟ್ಟವರು ಮಂಡ್ಯ ಮೂಲದವರು ಎಂದು ಹೇಳಲಾಗ್ತಿದೆ.

## ಹೈದರಾಬಾದ್ ನಲ್ಲಿ 125 ಅಡಿ ಎತ್ತರ ಭಾರತ ರತ್ನ ಡಾ. ಅಂಬೇಡ್ಕರ್ ಪ್ರತಿಮೆ ಲೋಕಾರ್ಪಣೆ

ಹೈದರಾಬಾದ್: ಅಂಬೇಡ್ಕರ್ ಜಯಂತಿಯ ಪ್ರಯುಕ್ತ ಇಂದು ಹೈದರಾಬಾದ್‌ನಲ್ಲಿ 125 ಅಡಿ ಎತ್ತರದ ಬಿ ಆರ್ ಅಂಬೇಡ್ಕರ್ ಪ್ರತಿಮೆ ಅದ್ದೂರಿಯಾಗಿ ಅನಾವರಣಗೊಳ್ಳಲಿದೆ. ತೆಲಂಗಾಣ ಮುಖ್ಯಮಂತ್ರಿ ಕೆ ಚಂದ್ರಶೇಖರ್ ರಾವ್ ಅವರು ಬಿಆರ್ ಅಂಬೇಡ್ಕರ್ ಅವರ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಇದು ಭಾರತದ ಅತೀ ಎತ್ತರದ ಅಂಬೇಡ್ಕರ್ ಪ್ರತಿಮೆಯಾಗಿದೆ. ಇದನ್ನು ರಾಜ್ಯ ಸಚಿವಾಲಯದ ಪಕ್ಕದಲ್ಲಿ ಬುದ್ಧನ ಪ್ರತಿಮೆಯ ಎದುರು ಮತ್ತು ತೆಲಂಗಾಣ ಹುತಾತ್ಮರ ಸ್ಮಾರಕದ ಪಕ್ಕದಲ್ಲಿ ಇರಿಸಲಾಗಿದೆ. ಅಂಬೇಡ್ಕರ್ ಪ್ರತಿಮೆಯನ್ನು ಸ್ಥಾಪಿಸುವ ನಿರ್ಧಾರವನ್ನು ಕೆಸಿಆರ್ ತೆಗೆದುಕೊಂಡಿದ್ದು,



ತಾಂತ್ರಿಕ ಮತ್ತು ಉತ್ಪಾದನಾ ಕ್ರಮಗಳನ್ನು ಅಂತಿಮಗೊಳಿಸಲು ಕನಿಷ್ಠ ಎರಡು ವರ್ಷಗಳನ್ನು ತೆಗೆದುಕೊಂಡಿದೆ.

ಅಂಬೇಡ್ಕರ್ ಪ್ರತಿಮೆ ಅನಾವರಣ ಸಭೆಗೆ ಪ್ರತಿ ಕ್ಷೇತ್ರದಿಂದ 300 ಜನರಂತೆ ಎಲ್ಲಾ 119 ಕ್ಷೇತ್ರಗಳಿಂದ 35,000 ಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವಂತೆ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರಿಗಾಗಿ ಸುಮಾರು 750 ಸರ್ಕಾರಿ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳು ಕಾರ್ಯನಿರ್ವಹಿಸಲಿವೆ. ಹೈದರಾಬಾದ್ ತಲುಪುವ ಮೊದಲು 50 ಕಿ.ಮೀ ಒಳಗೆ ವಿಧಾನಸಭೆ ಸಂಕೀರ್ಣಕ್ಕೆ ಬರುವ ಜನರಿಗೆ ಆಹಾರದ ವ್ಯವಸ್ಥೆ ಕೂಡ ಮಾಡಲಾಗಿದೆ.

ಬಾಬಾಸಾಹೇಬ್ ಅಥವಾ 'ಭಾರತೀಯ ಸಂವಿಧಾನದ ಪಿತಾಮಹ' ಎಂದು ಪ್ರೀತಿಯಿಂದ ಕರೆಯಲ್ಪಡುವ ಡಾ ಭೀಮ್ ರಾವ್ ಅಂಬೇಡ್ಕರ್ ಅವರು ಭಾರತದ ಸಂವಿಧಾನದ ಪ್ರಮುಖ ವಾಸ್ತುಶಿಲ್ಪಿ. 1891 ರ ಏಪ್ರಿಲ್ 14 ರಂದು ಜನಿಸಿದ ಅಂಬೇಡ್ಕರ್ ಅವರು ದೇಶದಲ್ಲಿ ಜಾತಿ ವ್ಯವಸ್ಥೆ ಮತ್ತು ಲಕ್ಷಾಂತರ ಭಾರತೀಯರನ್ನು ಬಾಧಿಸಿರುವ ಸಾಮಾಜಿಕ–ಆರ್ಥಿಕ ಅಭಾವದ ವಿರುದ್ಧ ಹೋರಾಡ ನಡೆಸಿ ದೇಶದಾದ್ಯಂತ ಹೆಸರುವಾಸಿಯಾಗಿದ್ದಾರೆ.

ಅಂಬೇಡ್ಕರ್ ಅವರ ಮೂಲ ಹೆಸರು ಅಂಬಾವಡೇಕರ್. ಇದು ಅವರ ಸ್ಥಳೀಯ ಹಳ್ಳಿಯಾದ ಅಂಬಾವಾಡೆ ಎಂಬ ಹೆಸ–ರಿನಿಂದ ಬಂದಿದೆ. ಆದಾಗ್ಯೂ, ಅವರ ಶಿಕ್ಷಕರು ಶಾಲೆಯ ದಾಖಲೆಗಳಲ್ಲಿ ಅವರ ಕೊನೆಯ ಹೆಸರನ್ನು 'ಅಂಬಾವಡೇಕರ್' ನಿಂದ ಅವರ ಸ್ವಂತ ಉಪನಾಮ 'ಅಂಬೇಡ್ಕರ್' ಎಂದು ಬದಲಾಯಿಸಿದ್ದರು. ಬಾಬಾಸಾಹೇಬರು ವಿದ್ಯಾರ್ಥಿಯಾಗಿ "ಅಸ್ಪೃಶ್ಯರ" ಕುಟುಂಬಕ್ಕೆ ಸೇರಿದವರಾಗಿರುವುದರಿಂದ ಉನ್ನತ ಜಾತಿಗಳ ವಿದ್ಯಾರ್ಥಿಗಳ ಜೊತೆಗೆ ತರಗತಿಯಲ್ಲಿ ಕುಳಿತುಕೊಳ್ಳಲು ಅವಕಾಶವಿರಲಿಲ್ಲ. ಇದೇ ಕಾರಣ ಅವರು ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆಯ ವಿರುದ್ಧ ಧನಿಯೆತ್ತಲು ಸಾಧ್ಯವಾಯಿತು.

ಬಿಆರ್ ಅಂಬೇಡ್ಕರ್ ಅವರು ಸ್ವತಂತ್ರ ಭಾರತದ ಮೊದಲ ಕಾನೂನು ಮತ್ತು ನ್ಯಾಯ ಸಚಿವರಾಗಿದ್ದು,ಆಗಸ್ಟ್ 29, 1947 ರಿಂದ ಜನವರಿ 24, 1950 ರವರೆಗೆ ಅಧಿಕಾರದಲ್ಲಿದ್ದರು. ವಿಧಿವಶರಾಗುವ ಎರಡು ತಿಂಗಳ ಮುಂಚೆ ಬಾಬಾಸಾಹೇಬರು ಬೌದ್ಧ ಧರ್ಮಕ್ಕೆ ಮತಾಂತರಗೊಂಡರು. ಡಿಸೆಂಬರ್ 6, 1956 ರಂದು ದೆಹಲಿಯಲ್ಲಿ ನಿಧನರಾದರು.


# ಸಿದ್ದು, ಡಿಕೆಶಿ ಕಟ್ಟಿಹಾಕಲು ಹೊಸತಂತ್ರ

## ಚಕ್ರವ್ಯೂಹ ಭೇದಿಸಲು ಅಶೋಕ್, ಸೋಮಣ್ಣ ಗೆ ಟಿಕೆಟ್

ಬೆಂಗಳೂರು: ತಮ್ಮ ತಮ್ಮೊಳಗೆ ಏನೆಲ್ಲಾ ಭಿನ್ನಾಭಿಪ್ರಾಯ ಗಳಿದ್ದರೂ ವಿಧಾನಸಭೆ ಪ್ರತಿ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಬಹುಮತ ತಂದುಕೊಡಲು ಅವಿರತ ಶ್ರಮ ಪಡುತ್ತಿದ್ದಾರೆ. ಜಂಟಿಯಾಗಿಯೂ ಹೌದು! ಪ್ರತ್ಯೇಕವಾಗಿಯೂ ಹೌದು! ಬಿಜೆಪಿಯ ಆಂತರಿಕ ಸಮೀಕ್ಷೆಗಳ ಪ್ರಕಾರ ಸ್ಥಾನಗಳ ಗಳಿಕೆಯಲ್ಲಿ ಕಾಂಗ್ರೆಸ್ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ. ತಾನು ಎರಡನೇ ಸ್ಥಾನಕ್ಕೆ ಕುಸಿಯುತ್ತೇನೆ ಎಂಬ ಕಟು ಸತ್ಯ ಬಿಜೆಪಿಯನ್ನು ಕಂಗೆಡಿಸಿದೆ.

ಕಾಂಗ್ರೆಸ್ ನ ಇಬ್ಬರೂ ನಾಯಕರು ಕಾಲಿಗೆ ಚಕ್ರ ಕಟ್ಟಿ ಕೊಂಡವರಂತೆ ರಾಜ್ಯ ಸುತ್ತುತ್ತಿದ್ದಾರೆ. ಉಚಿತ ವಿದ್ಯುತ್, ಮಹಿಳೆಯರು ಮತ್ತು ನಿರುದ್ಯೋಗಿ ಯುವಕರಿಗೆ ಹಲವು ಸೌಲಭ್ಯಗಳನ್ನು ಘೋಷಿಸುವ ಮೂಲಕ ಮತದಾರರಿಗೆ ಹತ್ತಿರವಾಗಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಭಾರಿ ಭಿನ್ನಮತ ಕಾಂಗ್ರೆಸ್ ಪಕ್ಷ ಕ್ಕಿಂತಲೂ ಹೆಚ್ಚು ಬಿಜೆಪಿಯನ್ನು ಭಾದಿಸುತ್ತಿದೆ.

ಈ ಜೋಡಿ ಎತ್ತುಗಳನ್ನು ಕಟ್ಟಿ ಹಾಕಲು ಬಿಜೆಪಿ ರಣ ತಂತ್ರ ರೂಪಿಸಿದೆ. ಪಟ್ಟಿ ಬಿಡುಗಡೆ ವಿಳಂಬಕ್ಕೆ ಇದೂ ಒಂದು ಕಾರಣ ಎನ್ನಲಾಗಿದೆ. ಮುಖ್ಯಮಂತ್ರಿಯಾಗುವ ಹುಮ್ಮಸ್ಸು ಹೊಂದಿರುವ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರನ್ನು ಕಟ್ಟಿಹಾಕಲು ಅವರ ವಿರುದ್ದ ಪ್ರಬಲ



ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ತಂತ್ರದ ಭಾಗವಾಗಿ ಈ ಸೂತ್ರವನ್ನು ಹೆಣೆಯಲಾಗಿದೆ ಎಂದು ತಿಳಿದು ಬಂದಿದೆ.

ಸಿದ್ದರಾಮಯ್ಯ ವಿರುದ್ದ ಸೋಮಣ್ಣ, ಡಿ.ಕೆ. ಶಿವಕುಮಾರ್ ವಿರುದ್ದ ಅಶೋಕ್ ಅವರನ್ನು ಎದುರಾಳಿಗಳನ್ನಾಗಿ ಮಾಡಲಾಗಿದೆ. ಇದು ಬಲವಂತದ ತಂತ್ರ ಎಂದು ಅಶೋಕ್ ಮತ್ತು ಸೋಮಣ್ಣ ಇಬ್ಬರೂ ಅಲವತ್ತು ಕೊಂಡಿದ್ದಾರೆ.

ಫಲಿತಾಂಶ ಏನು ಎಂದು ತಿಳಿದಿದ್ದರೂ ನಷ್ಟಕ್ಕಿಂತ ಲಾಭ ಇದ್ದೇ ಇದೆ ಎನ್ನುವುದು ಬಿಜೆಪಿ ನಾಯಕರಿಗೆ ತಿಳಿಯದ ರಹಸ್ಯವೇನಲ್ಲ. ಕಾಂಗ್ರೆಸ್ ನ ಇಬ್ಬರೂ ಮುಖಂಡರು ಹೆಚ್ಚು ಸಮಯ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಳೆಯಬೇಕಾಗುತ್ತದೆ. ಇದರಿಂದ ಇತರೆ ಕ್ಷೇತ್ರಗಳತ್ತ ಅವರು ಗಮನ ಹರಿಸದ ಹಾಗೆ ಮಾಡಬಹುದು ಎನ್ನುವುದು ಬಿಜೆಪಿ ವಾದ.

ರಾಜಕೀಯವಾಗಿ ಬೇರೆ ಬೇರೆ ಪಕ್ಷಗಳಲ್ಲಿ ಇದ್ದರೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ವಸತಿ ಸಚಿವ ವಿ.ಸೋಮಣ್ಣ ವೈಯಕ್ತಿಕವಾಗಿ ಉತ್ತಮ ಸಂಬಂಧ ಹೊಂದಿದ್ದಾರೆ. ಪರಸ್ಪರ ವೈಯಕ್ತಿಕವಾಗಿ ಏಟು ಎದಿರೇಟು ಕೊಟ್ಟ ಉದಾಹರಣೆಗಳಿಲ್ಲ.

ವರುಣಾ ಕ್ಷೇತ್ರದಿಂದ ಬಿ.ವೈ.ವಿಜಯೇಂದ್ರ ಅವರನ್ನು ಕಣಕ್ಕೆ ಇಳಿಸಲು ಬಿಜೆಪಿ ಮುಖಂಡರು ತೀರ್ಮಾನಿಸಿದ್ದರು. ಆದರೆ ಇಲ್ಲಿ ರಿಸ್ಕ್ ಹೆಚ್ಚು ಎಂಬುದನ್ನು ಮನಗಂಡ ಯಡಿಯೂರಪ್ಪ, ವರುಣಾದಿಂದ ವಿಜಯೇಂದ್ರ ಸ್ಪರ್ಧಿಸುವುದಿಲ್ಲ ಎಂದು ಹೇಳುವ ಮೂಲಕ ಇತಿಶ್ರೀ ಹಾಡಿದರು.

ದೆಹಲಿಯಲ್ಲಿ ಟಿಕೆಟ್ ಹಂಚಿಕೆ ಸಂಬಂಧ ನಡೆದ ಸಭೆಯಲ್ಲಿ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರೂ ಆಗಿರುವ ಬಿ.ಎಸ್.ಯಡಿಯೂರಪ್ಪ ವರುಣಾದಲ್ಲಿ ಸೋಮಣ್ಣ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿದರೆ ಸಿದ್ದರಾಮಯ್ಯ ಅವರನ್ನು ಕಟ್ಟಿ ಹಾಕಬಹುದು ಎಂದು ಸಲಹೆ ನೀಡುವ ಮೂಲಕ ಭವಿಷ್ಯದ ವೀರಶೈವ ಮುಖಂಡನಾಗುವ ಪುತ್ರ ವಿಜಯೇಂದ್ರನ ಹಾದಿ ಸುಗಮವಾಗುವಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾದರು. ಒಂದೇ ಏಟಿಗೆ ಎರಡು ಹಕ್ಕಿ ಹೊಡೆಯುವಲ್ಲಿ ಜಯ ಸಾಧಿಸಿದರು.


ವರುಣಾದಲ್ಲಿ ವೀರಶೈವ ಸಮುದಾಯದ ಮತಗಳು ನಿರ್ಣಾಯಕ ಸಂಖ್ಯೆಯಲ್ಲಿದ್ದು, ಸೋಮಣ್ಣ ಸ್ಪರ್ಧಿಸಿದರೆ ಗೆಲುವು ಸಾಧ್ಯ ಎಂದು ಪ್ರತಿಪಾದಿಸಿದ್ದರು. ಈ ಅಂಶವನ್ನೇ ಆಧಾರವಾಗಿಟ್ಟುಕೊಂಡ ವರಿಷ್ಠರು ಸೋಮಣ್ಣ ಅವರನ್ನು ಕರೆಸಿಕೊಂಡು ಸ್ಪರ್ಧೆಗೆ ಸಿದ್ಧರಾಗುವಂತೆ ಸೂಚನೆ ನೀಡಿದ್ದಾರೆ. ಆಗದು ಎಂದು ಹೇಳಲು ಅವಕಾಶವನ್ನೂ ನೀಡಿಲ್ಲ. ಆದರೂ ಪಟ್ಟು ಬಿಡದ ಸೋಮಣ್ಣ ಗೋವಿಂದರಾಜ ನಗರ ಕ್ಷೇತ್ರದಲ್ಲಿ ತಮಗೆ ಇಲ್ಲವೇ ತಮ್ಮ ಪುತ್ರ ಅರುಣ್ ಸೋಮಣ್ಣಗೆ ಟಿಕೆಟ್ ನೀಡುವಂತೆ ದುಂಬಾಲು ಬಿದ್ದಿದ್ದಾರೆ. ಈ ಕ್ಷೇತ್ರದಲ್ಲಿ ಯಾವುದೇ ಭರವಸೆ ನೀಡದ ಹೈ ಕಮಾಂಡ್ ಚಾಮರಾಜ ನಗರ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಕಲ್ಪಿಸಿದ್ದಾರೆ. ಫಲಿತಾಂಶ ಏನೇ ಆದರೂ ಗೆಲುವಿನ ಸಿಹಿ ಯಡಿಯೂರಪ್ಪ ಅವರಿಗೆ ಎನ್ನುವುದು ಸುಳ್ಳಲ್ಲ.

ಯಡಿಯೂರಪ್ಪ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಕೆಆರ್‌ಐಡಿಎಲ್ ಅಧ್ಯಕ್ಷ ಎಂ. ರುದ್ರೇಶ್ ಈ ಕ್ಷೇತ್ರದ ಪ್ರಮುಖ ಟಿಕೆಟ್ ಆಕಾಂಕ್ಷಿಗಳಲ್ಲಿ ಒಬ್ಬರು. ಬೆಂಗಳೂರು ಮೂಲದವರೇ ಆಗಿದ್ದರೂ ಅಲ್ಲಿ ಟಿಕೆಟ್ ನಿರೀಕ್ಷೆಯಲ್ಲಿ ಎರಡು ವರ್ಷಗಳಿಂದ ಠಿಕಾಣಿ ಹೂಡಿದ್ದರು. ಟಿಕೆಟ್ ಕೈ ತಪ್ಪಿದ ಬೆನ್ನಲ್ಲೇ ಅವರು, ಸೋಮಣ್ಣ ವಿರುದ್ಧ ತಿರುಗಿ ಬಿದ್ದಿದ್ದಾರೆ. ಅಲ್ಲಿಗೆ ಸೋಮಣ್ಣ ಅವ–ರಿಗೆ ಎರಡೂ ಕ್ಷೇತ್ರಗಳು ಸುಲಭದ ತುತ್ತಲ್ಲ ಎನ್ನುವಂತಾಗಿದೆ. ಅಕಸ್ಮಾತ್ ಎರಡೂ ಕಡೆ ಸೋತರೆ ಸೋಮಣ್ಣ ಅವರ ರಾಜಕೀಯ ಭವಿಷ್ಯಕ್ಕೆ ತೆರೆ ಬಿದ್ದಂತಾಗುತ್ತದೆ.

ಈ ಮಧ್ಯೆ ಅರುಣ್ ಸೋಮಣ್ಣ ಸ್ಪರ್ಧೆಯ ವಿಚಾರದಲ್ಲಿ ವಿಜಯೇಂದ್ರ ಹಾಗೂ ಸೋಮಣ್ಣ ನಡುವೆ ಮುಸುಕಿನ ಗುದ್ದಾಟ ನಡೆದಿತ್ತು. ಹೈಕಮಾಂಡ್ ಮಧ್ಯಪ್ರವೇಶಿಸಿದ ನಂತರ ಸೋಮಣ್ಣ ಈ ವಿಷಯದಲ್ಲಿ ಮೌನಕ್ಕೆ ಶರಣಾಗಿದ್ದರು. ಎರಡು ಕ್ಷೇತ್ರಗಳಲ್ಲಿ ತಂದೆ ಮಗನಿಗೆ ಟಿಕೆಟ್ ನೀಡುವುದಿಲ್ಲ ಎಂದು ವರಿಷ್ಠರು ಹೇಳಿದ್ದಕ್ಕೆ ಪಕ್ಷ ಬಿಟ್ಟು ಕಾಂಗ್ರೆಸ್ ಕೈ ಹಿಡಿಯಲು ಸಜ್ಜಾಗಿದ್ದು ವ–ರಿಷ್ಠರ ಸಿಟ್ಟಿಗೆ ಕಾರಣವಾಗಿತ್ತು.

ಸಿದ್ದರಾಮಯ್ಯ ಹಾಗೂ ಶಿವಕುಮಾರ್ ವಿರುದ್ಧ ಪ್ರಬಲ ಅಭ್ಯರ್ಥಿಗಳನ್ನು ಹಾಕುತ್ತೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ ನೀಡಿದ್ದು ಈ ರಹಸ್ಯ ಅವರಿಗೆ ತಿಳಿದಿತ್ತು ಎನ್ನುವುದನ್ನು ತೋ–ರಿಸುತ್ತದೆ. }2ನೇ ಪುಟಕ್ಕೆ

### ಬಂಡಾಯಕ್ಕೆ ಬೆದರಿದ ಕೈ ಪಡೆ



166 ಅಭ್ಯರ್ಥಿಗಳ ಎರಡು ಪಟ್ಟಿ ಬಿಡುಗಡೆ ಮಾಡಿದ ನಂತರ ಅಂತಿಮ ಪಟ್ಟಿ ಬಿಡುಗಡೆ ಗೆ ಕಾಂಗ್ರೆಸ್ ಹಿಂದೇಟು ಹಾಕುತ್ತಿದೆ. ಬಿಜೆಪಿಯನ್ನು ಕಾಡುತ್ತಿರುವ ಬಂಡಾಯದ ಬಿಸಿಯನ್ನು ಅರಿತ ಕಾಂಗ್ರೆಸ್ ನಾಯಕರು, ಮೂರನೇ ಪಟ್ಟಿ ಪ್ರಕಟಿಸಲು ವಿಳಂಬ ನೀತಿ ಅನುಸರಿಸುತ್ತಿದ್ದಾರೆ.

## ವೈದ್ಯಕೀಯ ಹಾಗೂ ಶೈಕ್ಷಣಿಕ ರಂಗಕ್ಕೆ ಮೊದಲ ಆಧ್ಯತೆ: ಡಾ.ರವಿ ಪಾಟೀಲ



ಬೆಳಗಾವಿ: ಉತ್ತರ ಮತಕ್ಷೇತ್ರದಲ್ಲಿ ಟಿಕೆಟ್ ವಿಚಾರದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಬಿಜೆಪಿ ಹೈಕಮಾಂಡ ನನಗೆ ಇಗಾಗಲೇ ಬಿ–ಫಾರ್ಮ್ ಕೊಟ್ಟಿದ್ದೆ, ಏಪ್ರಿಲ್ 17 ರಂದು ನಾನು ನಾಮಿನೇಷನ್ ಮಾಡುತ್ತೇನೆ ಎಂದು ಬೆಳಗಾವಿ ಉತ್ತರ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ರವಿ ಪಾಟೀಲ ಹೇಳಿದರು.

ಸರ್ವರಿಗೂ ಸಮ ಬಾಳು ಸರ್ವರಿಗೂ ಸಮ ಪಾಲು ಮೋಟೋದೊಂದಿಗೆ ಜನ ಮನ ಗೆದ್ದ ಪ್ರವೀಣ ಬಿಜೆಪಿ ಟಿಕೆಟ್ ಪಟ್ಟಿ ಮರುಪರಿಶೀಲನೆ, ಸಂಜಯ ಪಾಟೀಲಗೆ ಟಿಕೆಟ್ ನೀಡಬೇಕು. ಜೈನ ಸಮಾಜ ಸ್ಪಷ್ಟನೇ, ಗ್ರಾಮೀಣದಲ್ಲಿ ಜೈನ್ ಬಿಜೆಪಿ ವಿರೋದ?

ಬೆಂಗಳೂರಿನಿಂದ ಬೆಳಗಾವಿಗೆ ಆಗಮಿಸಿದ ಅನಿಲ್ ಬೆನಕೆ : ಟಿಕೆಟ್ ವಿಚಾರ, ಮುಂದಿನ ನಡೆ ಏನು ಎನ್ನುವುದರ ಬಗ್ಗೆ ಸ್ಪಷ್ಟನೇ ನೀಡದ ಬೆನಕೆ. ಚುನಾವಣೆ ಮುಂಚೆಯೇ ಬೆಳಗಾವಿ ಅಭಿವೃದ್ಧಿ ಬಗ್ಗೆ ಯೋಜನೆ ರೂಪಿಸಿದ್ದೆನೆ. ನಾನು ಒಬ್ಬ ವೈದ್ಯ ಆಗಿರುವುದರಿಂದ ಮೊದಲಿಗೆ ಆರೋಗ್ಯಕ್ಕೆ ಮೊದಲ ಆದ್ಯತೆ ನೀಡುತ್ತೇನೆ. ಬೆಳಗಾವಿ ಜನತೆಗೆ ಮೊದಲು ಸುದ್ಧ ಕುಡಿಯುವ ನೀರಿನ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ ಬೆಳಗಾವಿಯನ್ನು ಹೊಸ ಮಾದರಿಯಲ್ಲಿ ರೇಡಿ ಮಾಡುವ ಯೋಜನೆ ಮಾಡಿದ್ದೇನೆ ಎಂದು ಹೇಳಿದರು. ಬೆಳಗಾವಿ ನಗರದಲ್ಲಿ ಪ್ರತಿ ನಾಲ್ಕು ವಾರ್ಡ್ ಗಳಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯುವ ಮೂಲಕ, ಬೆಳಗಾವಿ ಜನತೆಗೆ ಉತ್ತಮ ವೈದ್ಯಕೀಯ ಸೌಲಭ್ಯ ನೀಡುವ ಯೋಜನೆ ರೂಪಿಸಿದ್ದೇನೆ. ಶಿಕ್ಷಣಕ್ಕೆ ಹೆಚ್ಚು ಆಧ್ಯತೆ ನೀಡುವ ಮೂಲಕ ಶೈಕ್ಷಣಿಕವಾಗಿ ಬೆಳಗಾವಿಯನ್ನು ಅಭಿವೃದ್ಧಿ ಮಾಡುತ್ತೇನೆ ಎಂದು ಹೇಳಿದರು. ಬಿಜೆಪಿ ಪಕ್ಷದ ಬೆಳವಣಿಗೆಗೆ ನಾವು ಶ್ರಮಿಸುತ್ತೇವೆ. ಅಧಿಕಾರಿ ಮುಖ್ಯವಲ್ಲ ಪಕ್ಷ ಮುಖ್ಯ. ಪಕ್ಷಕ್ಕೆ ಹೆಚ್ಚು ಆದ್ಯತೆಯನ್ನು ನೀಡಿ ಪಕ್ಷವನ್ನು ಬೆಳೆಸುವ ಕಾರ್ಯ ಮಾಡುತ್ತೇನೆ ಎಂದು ಡಾ.ರವಿ ಪಾಟೀಲ ಹೇಳಿದರು.

## ಚುನಾವಣಾ ವೆಚ್ಚ ವೀಕ್ಷಕರು ಸಾರ್ವಜನಿಕರ ಭೇಟಿಗೆ ಲಭ್ಯ

ಬೆಳಗಾವಿ: ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ-2023 ರ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ವಿಧಾನಸಭಾ ಮತಕ್ಷೇತ್ರಕ್ಕೆ ಚುನಾವಣಾ ಆಯೋಗದಿಂದ ನೇಮಿಸಲಾಗಿರುವ ಚುನಾವಣಾ ವೆಚ್ಚ ವೀಕ್ಷಕರು ಸಾರ್ವಜನಿಕರ ಭೇಟಿಗೆ ಲಭ್ಯವಿರುತ್ತಾರೆ.

**ಮತಕ್ಷೇತ್ರಗಳು ಹಾಗೂ ಚುನಾವಣಾ ವೆಚ್ಚ ವೀಕ್ಷಕರ ವಿವರ:**

* 01-ನಿಪ್ಪಾಣಿ, 02-ಚಿಕ್ಕೋಡಿ-ಸದಲಗಾ, 03-ಅಥಣಿ ಕ್ಷೇತ್ರಗಳಿಗೆ ಅರನಬ್ ಸರಕಾರ CBDT, IRS ಮೊ.ಸಂ 8105684926, 8147265859, ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ಪಿಡಬ್ಲ್ಯೂಡಿ ಐ.ಬಿ ಚಿಕ್ಕೋಡಿ ವಿ.ಐ.ಪಿ ಸೂಟ್. ನಂ-2, ಪಿಡಬ್ಲ್ಯೂಡಿ ಐ.ಬಿ. ಅಥಣಿ ವಿ.ಐ.ಪಿ ಸೂಟ್. ನಂ-2 ರಲ್ಲಿ ಲಭ್ಯವಿರುತ್ತಾರೆ.
* 04-ಕಾಗವಾಡ, 05-ಕುಡಚಿ ಕ್ಷೇತ್ರಗಳಿಗೆ ಚನಬಾಷಾಮೀರನ್ CBEC, IRS(C&CE) ಮೊ.ಸಂ 7349408283, ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ಪಿಡಬ್ಲ್ಯೂಡಿ ಐ.ಬಿ ಕಾಗವಾಡ ವಿ.ಐ.ಪಿ ಸೂಟ್. ನಂ-2 ರಲ್ಲಿ ಲಭ್ಯವಿರುತ್ತಾರೆ.
* 06-ರಾಯಬಾಗ, 07-ಹುಕ್ಕೇರಿ ಕ್ಷೇತ್ರಗಳಿಗೆ ಸಿದ್ಧಾರ್ಥನ್ ಟಿ CBEC, IRS(C&CE) ಮೊ.ಸಂ 7349751819, ಬೆಳಿಗ್ಗೆ 10 ರಿಂದ 11 ಗಗಂಟೆವರೆಗೆ ಪಿಡಬ್ಲ್ಯೂಡಿ ಐ.ಬಿ ರಾಯಬಾಗ ವಿ.ಐ.ಪಿ ಸೂಟ್. ನಂ-2, ಪಿಡಬ್ಲ್ಯೂಡಿ ಐ.ಬಿ ಹುಕ್ಕೇರಿ ವಿ.ಐ.ಪಿ ಸೂಟ್. ನಂ-2 ರಲ್ಲಿ ಲಭ್ಯವಿರುತ್ತಾರೆ.
* 08-ಅರಬಾವಿ ಕ್ಷೇತ್ರಕ್ಕೆ ಸುಮಂಥ ಶ್ರೀನಿವಾಸ ಎ.ಎಸ್, CBDT, IRS ಮೊ.ಸಂ 7338215859, ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ಪಿಡಬ್ಲ್ಯೂಡಿ ಐ.ಬಿ ಅರಬಾವಿ ವಿ.ಐ.ಪಿ ಸೂಟ್. ನಂ-2 ರಲ್ಲಿ ಲಭ್ಯವಿರುತ್ತಾರೆ.
* 09-ಗೋಕಾಕ ಕ್ಷೇತ್ರಕ್ಕೆ ಮಧುಕರ್ ಅವೇಸ್ CBDT, IRS ಮೊ.ಸಂ 9980127719 ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ಪಿಡಬ್ಲ್ಯೂಡಿ ಐ.ಬಿ ಗೋಕಾಕ ವಿ.ಐ.ಪಿ ಸೂಟ್. ನಂ-2 ರಲ್ಲಿ ಲಭ್ಯವಿರುತ್ತಾರೆ.
* 10-ಯಮಕನಮರಡಿ ಕ್ಷೇತ್ರಕ್ಕೆ ರಾಕೇಶ್ ಜೆ. ರಾಣಾ CBDT, IRS ಮೊ.ಸಂ 7619697879, ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ಪಿಡಬ್ಲ್ಯೂಡಿ ಐ.ಬಿ ಸಂಕೇಶ್ವರ ವಿ.ಐ.ಪಿ ಸೂಟ್. ನಂ-2 ರಲ್ಲಿ ಲಭ್ಯವಿರುತ್ತಾರೆ.
* 11-ಬೆಳಗಾವಿ ಉತ್ತರ ಮತ್ತು 12-ಬೆಳಗಾವಿ ದಕ್ಷಿಣ ಕ್ಷೇತ್ರಗಳಿಗೆ ಅತುಲ್ ಕುಮಾರ್ ಪಾಂಡೆ CBDT, IRS ಮೊ.ಸಂ 8296017879 ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ಪಿಡಬ್ಲ್ಯೂಡಿ ಐ.ಬಿ ಹಳೆ ಸರ್ಕ್ಯೂಟ್ ಹೌಸ ಬೆಳಗಾವಿ. ವಿ.ಐ.ಪಿ ಸೂಟ್. ನಂ-3 ರಲ್ಲಿ ಲಭ್ಯವಿರುತ್ತಾರೆ.
* 13-ಬೆಳಗಾವಿ ಗ್ರಾಮೀಣ ಕ್ಷೇತ್ರಕ್ಕೆ ಸುಬೋಧ್ ಸಿಂಘ್ CBEC,IRS C&CE) ಮೊ.ಸಂ 8197742829 ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ಪಿಡಬ್ಲ್ಯೂಡಿ ಐ.ಬಿ ಹಳೆ ಸರ್ಕ್ಯೂಟ್ ಹೌಸ ಬೆಳಗಾವಿ. ವಿ.ಐ.ಪಿ ಸೂಟ್. ನಂ-4 ರಲ್ಲಿ ಲಭ್ಯವಿರುತ್ತಾರೆ.
* 14-ಖಾನಾಪುರ ಮತ್ತು 15-ಕಿತ್ತೂರು ಕ್ಷೇತ್ರಗಳಿಗೆ ಸಂಜೀತ ಸಿಂಘ್ CBEC,IRS C&CE) ಮೊ.ಸಂ 7204998729, ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ಪಿಡಬ್ಲ್ಯೂಡಿ ಐ.ಬಿ ಖಾನಾಪುರ ವಿ.ಐ.ಪಿ ಸೂಟ್. ನಂ-2, ಪಿಡಬ್ಲ್ಯೂಡಿ ಐ.ಬಿ ಕಿತ್ತೂರು ವಿ.ಐ.ಪಿ ಸೂಟ್. ನಂ-2 ರಲ್ಲಿ ಲಭ್ಯವಿರುತ್ತಾರೆ.
* 16-ಬೈಲಹೊಂಗಲ ಮತ್ತು 17-ಸವದತ್ತಿ ಯಲ್ಲಮ್ಮ ಕ್ಷೇತ್ರಗಳಿಗೆ ಯೋಗೇಶ ಯಾದವ CBEC,IRS C&CE) ಮೊ.ಸಂ 8197920327, ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ಪಿಡಬ್ಲ್ಯೂಡಿ ಐ.ಬಿ ಬೈಲಹೊಂಗಲ ವಿ.ಐ.ಪಿ ಸೂಟ್. ನಂ-2, ಪಿಡಬ್ಲ್ಯೂಡಿ ಐ.ಬಿ ಸವದತ್ತಿ ವಿ.ಐ.ಪಿ ಸೂಟ್. ನಂ-2 ರಲ್ಲಿ ಲಭ್ಯವಿರುತ್ತಾರೆ.
* 18-ರಾಮದುರ್ಗ ಮತಕ್ಷೇತ್ರಕ್ಕೆ ಎಂ. ಎಝಿಲಾರಸನ್ CBEC,IRS C&CE) ಮೊ.ಸಂ 7624974683, ಬೆಳಿಗ್ಗೆ 10 ರಿಂದ 11 ಗಂಟೆವರೆಗೆ ಪಿಡಬ್ಲ್ಯೂಡಿ ಐ.ಬಿ ರಾಮದುರ್ಗ ವಿ.ಐ.ಪಿ ಸೂಟ್. ನಂ-2 ರಲ್ಲಿ ಲಭ್ಯವಿರುತ್ತಾರೆ ಎಂದು ಬೆಳಗಾವಿ ಜಿಲ್ಲಾ ಚುನಾವಣಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ಹೆಚ್ಚುವರಿಯಾಗಿ 2 ಟಿಎಂಸಿ ನೀರು ಬಿಡುಗಡೆಗೆ ಸರ್ಕಾರಕ್ಕೆ ಮನವಿ


ಬೆಳಗಾವಿ: ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳ ಕೃಷ್ಣಾ ನದಿತೀರದ ಗ್ರಾಮಗಳಲ್ಲಿ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗುವ ಸಾಧ್ಯತೆಗಳಿರುವುದರಿಂದ ಮಹಾರಾಷ್ಟ್ರದಿಂದ ಕೃಷ್ಣಾ ನದಿಯ ಹಿಪ್ಪರಗಿ ಬ್ಯಾರೇಜ್ ಗೆ ಎರಡು ಟಿಎಂಸಿ ಹೆಚ್ಚುವರಿ ನೀರು ಬಿಡುಗಡೆಗೆ ಸರಕಾರದ ಮಟ್ಟದಲ್ಲಿ ಅಗತ್ಯ ಕ್ರಮಕೈಗೊಳಬೇಕು ಎಂದು ಪ್ರಾದೇಶಿಕ ಆಯುಕ್ತರಾದ ಡಾ.ಬಗಾದಿ ಗೌತಮ್ ಅವರು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದಾರೆ.

ಪ್ರಸ್ತುತ ಬೇಸಿಗೆಯಲ್ಲಿ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳ ಕೃಷ್ಣಾ ನದಿತೀರದ ಗ್ರಾಮಗಳಲ್ಲಿ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗುವ ಸಾಧ್ಯತೆಗಳಿವೆ.

ಆದ್ದರಿಂದ ಜನರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ತಪ್ಪಿಸಲು ಮಹಾರಾಷ್ಟ್ರ ರಾಜ್ಯದ ವಾರಣಾ/ಕೊಯ್ನಾ ಜಲಾಶಯಗಳಿಂದ ಎರಡು ಟಿಎಂಸಿ ಹೆಚ್ಚುವರಿಯಾಗಿ ಕೃಷ್ಣಾ ನದಿ ಮೂಲಕ ಹಿಪ್ಪರಗಿ ಬ್ಯಾರೇಜ್ ಗೆ ಶೀಘ್ರ ಬಿಡುಗಡೆಗೊಳಿಸುವ ಅಗತ್ಯವಿರುತ್ತದೆ ಎಂದು ಅವರು ಪತ್ರದಲ್ಲಿ ತಿಳಿಸಿರುತ್ತಾರೆ. ಕುಡಿಯುವ ನೀರು ಬಿಡುಗಡೆಯ ಅಗತ್ಯತೆ ಕುರಿತು ಕರ್ನಾಟಕ ನೀರಾವರಿ ನಿಗಮದ ಉತ್ತರ ವಲಯದ ಮುಖ್ಯ ಅಭಿಯಂತರರು ಹಾಗೂ ಬಾಗಲಕೋಟೆ ಜಿಲ್ಲಾಧಿಕಾರಿ ನೀಡಿರುವ ವರದಿಗಳನ್ನು ತಮ್ಮ ಪತ್ರದಲ್ಲಿ ಪ್ರಸ್ತಾಪಿಸಿರುವ ಪ್ರಾದೇಶಿಕ ಆಯುಕ್ತರು, ಎರಡು ಟಿಎಂಸಿ ಹೆಚ್ಚುವರಿ ನೀರು ಬಿಡುಗಡೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಪಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರದ ಮೂಲಕ ಮನವಿ ಮಾಡಿಕೊಂಡಿರುತ್ತಾರೆ.

# ಜೆಡಿಎಸ್ 49 ಅಭ್ಯರ್ಥಿಗಳ ಎರಡನೇ ಪಟ್ಟಿ ಪ್ರಕಟ

ಬೆಂಗಳೂರು: ಕರ್ನಾಟಕ ವಿಧಾನಸಭಾ ಚುನಾವಣೆಗೆ 49 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ ಕುಮಾರಸ್ವಾಮಿ ಅವರು ಶುಕ್ರವಾರ ಪ್ರಕಟಿಸಿದರು.



ತೀವ್ರ ಕುತೂಹಲ ಕೆರಳಿಸಿದ್ದ ಹಾಸನ ವಿಧಾನಸಭಾ ಕ್ಷೇತ್ರದಿಂದ ಎಚ್.ಪಿ ಸ್ವರೂಪ್ ಅವರನ್ನು ಕಣಕ್ಕಿಳಿಸಲಾಗುತ್ತಿದ್ದು, ಶಾಸಕ ಎಚ್.ಡಿ ರೇವಣ್ಣ ಪತ್ನಿ ಭವಾನಿಗೆ ನಿರಾಶೆಯಾಗಿದೆ.

ಪಟ್ಟಿ ಪ್ರಕಟಣೆಗೂ ಮುನ್ನ ಎಚ್.ಡಿ ಕುಮಾರಸ್ವಾಮಿ ಅವರು ಬೆಂಗಳೂರಿನಲ್ಲಿರುವ ಪಕ್ಷದ ಕೇಂದ್ರ ಕಚೇರಿ ಜೆ.ಪಿ ಭವನದಲ್ಲಿ ಸಭೆ ನಡೆಸಿದರು. ಈ ಸಭೆಯಲ್ಲಿ ರೇವಣ್ಣ ಅವರೂ ಉಪಸ್ಥಿತರಿದ್ದರು.

ಪಟ್ಟಿಯಲ್ಲಿನ 48 ಹೆಸರುಗಳನ್ನು ಕುಮಾರಸ್ವಾಮಿ ಪ್ರಕಟಿಸಿದರೆ, ಹಾಸನದ ಟಿಕೆಟ್ ಅನ್ನು ರೇವಣ್ಣ ಅವರು ಘೋಷಿಸಿದರು.

**ಕುಡುಚಿ (ಎಸ್.ಸಿ)- ಆನಂದ ಮಾಳಗಿ**
**ರಾಯಭಾಗ (ಎಸ್.ಸಿ)- ಪ್ರದೀಪ ಮಾಳಗಿ**
**ಸವದತ್ತಿಯಲ್ಲಮ್ಮ- ಸೌರಭ ಆನಂದ ಚೋಪ್ರಾ**
**ಅಥಣಿ- ಪೂಜ್ಯ ಶ್ರೀ ಶಶಿಕಾಂತ ಪಡಸಲಗಿ ಗುರುಗಳು**
**ಹುಬ್ಬಳ್ಳಿ-ಧಾರವಾಡ ಪೂರ್ವ(ಎಸ್.ಸಿ)- ವೀರಭದ್ರಪ್ಪ ಹಾಲರವಿ**
**ಕುಮಟಾ- ಸೂರಜ್ ಸೋನಿ ನಾಯಕ**
**ಹಳಯಾಳ- ಎಸ್.ಎಲ್. ಘೋಟ್ನೆಕರ್**
**ಭಟ್ಕಳ- ನಾಗೇಂದ್ರ ನಾಯಕ್**
**ಶಿರಸಿ-ಸಿದ್ದಾಪುರ- ಉಪೇಂದ್ರ ಪೈ**
**ಯಲ್ಲಾಪುರ- ಡಾ॥ ನಾಗೇಶ ನಾಯಕ್**
**ಚಿತ್ತಾಪುರ (ಎಸ್.ಸಿ)- ಸುಭಾಷಚಂದ್ರ ರಾಥೋಡ**
**ಕಲ್ಬುರ್ಗಿ ಉತ್ತರ- ನಾಸೀರ್ ಹುಸೇನ್ ಉಸ್ತಾದ್**
**ಬಳ್ಳಾಲ ನಗರ- ಅಲ್ಲಾಭಕ್ಷ ಅಲಿಯಾಸ್ ಮುನ್ನಾ**
**ಹಗಲಿಬೊಮ್ಮನಹಳ್ಳಿ (ಎಸ್.ಸಿ) ।ಶ್ರೀ ಪರಮೇಶ್ವರಪ್ಪ**
**ಹರಪನಹಳ್ಳಿ- ಎನ್. ಎಂ. ನೂರ್ ಅಹ್ಮದ್**
**ಸಿರಗುಪ್ಪ (ಎಸ್.ಟಿ)- ಪರಮೇಶ್ವರ ನಾಯಕ**
**ಕಂಪ್ಲಿ(ಎಸ್.ಟಿ)- ರಾಜು ನಾಯಕ್**
**ಕೊಳ್ಳೇಗಾಲ (ಎಸ್.ಸಿ)-ಪುಟ್ಟಸ್ವಾಮಿ**
**ಗುಂಡ್ಲುಪೇಟೆ- ಕಡಬೂರ್ ಮಂಜುನಾಥ**
**ಕಾಪು- ಕು.ಸಬಿನಾ ಸಮದ್**
**ಕಾರ್ಕಳ- ಶ್ರೀಕಾಂತ ಕೊಳ್ಪೂರ್**
**ಉಡುಪಿ- ದಕ್ಷತ್ ಆರ್. ಶೆಟ್ಟಿ**
**ಬೈಂದೂರು- ಮನ್ಸೂರ್ ಇಬ್ರಾಹಿಂ**
**ಕುಂದಾಪುರ- ರಮೇಶ್ ಕುಂದಾಪುರ**
**ಮಂಗಳೂರು ದಕ್ಷಿಣ- ಸುಮತಿ ಹೆಗಡೆ**
**ಕನಕಪುರ- ನಾಗರಾಜ**
**ಯಲಹಂಕ- ಎಂ. ಮುನೇಗೌಡ**
**ಸರ್ವಜ್ಞನಗರ- ಮೊಹ್ಮದ್ ಮುಸ್ತಾಫ್**
**ಯಶವಂತಪುರ- ಜವರಾಗೌಡ**
**ತಿಪಟೂರು- ಶಾಂತಕುಮಾರ**
**ಶಿರಾ- ಆರ್.ಉಗ್ರೇಶ್**
**ಹಾನಗಲ್- ಮನೋಹರ್ ತಹಸಿಲ್ದಾರ್**
**ಸಿಂಧಲ- ವಿಶಾಲಾಕ್ಷಿ ಶಿವಾನಂದ**
**ಗಂಗಾವತಿ- ಹೆಚ್. ಆರ್. ಚನ್ನಕೇಶವ**
**ಹೆಚ್.ಡಿ. ಕೋಟೆ (ಎಸ್.ಟಿ)- ಜಯಪ್ರಕಾಶ್ ಸಿ.**
**ಜೇವರ್ಗಿ- ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ**
**ಶಹಾಪೂರ - ಗುರುಲಿಂಗಪ್ಪಗೌಡ**
**ಕಾರವಾರ- ಚೈತ್ರಾ ಕೋಟಕಾರ್**
**ಸುತ್ತೂರು- ದಿವ್ಯಾ ಪ್ರಭಾ**
**ಕಡೋರ್- ವೈ.ಎಸ್.ಬಿ. ದತ್ತ**
**ಹೊಳೆನರಸೀಪುರ- ಹೆಚ್.ಡಿ. ರೇವಣ್ಣ**
**ಬೇಲೂರು- ಕೆ.ಎಸ್. ಲಿಂಗೇಶ್**
**ಸಕಲೇಶಮುರ-ಹೆಚ್.ಕೆ. ಕುಮಾರಸ್ವಾಮಿ**
**ಅರಕಲಗೂಡು- ಎ. ಮಂಜು**
**ಹಾಸನ- ಸ್ವರೂಪ ಪ್ರಕಾಶ್**
**ಶ್ರವಣಬೆಳಗೊಳ- ಸಿ.ಎನ್. ಬಾಲಕೃಷ್ಣ**
**ಮಹಾಲಕ್ಷ್ಮೀ ಲೇಔಟ್-ರಾಜಣ್ಣ**
**ಹಿರಿಯೂರು- ರವೀಂದ್ರಪ್ಪ**
**ಮಾಯಕೊಂಡ (ಎಸ್ಸಿ)-ಆನಂದಪ್ಪ**

## ಗುಪ್ತ ಸಭೆ ನಡೆಸಿದ ರಮೇಶ ಜಾರಕಿಹೊಳಿ

ಅಥಣಿ : ರಾಜ್ಯ ರಾಜಕಾರಣದಲ್ಲಿ ತಲ್ಲಣ ಹುಟ್ಟಿಸಿದ ಲಕ್ಷ್ಮಣ ಸವದಿ ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗುತ್ತಿದಂತೆಯೇ ರಾಜ್ಯ ಬಿಜೆಪಿಯಲ್ಲಿ ಸಂಚಲನ ಉಂಟಾಗಿದೆ. ಈ ಬೆಳವಣಿಗೆಯ ಮಧ್ಯೆ ದಿಢೀರ ಎಂದು ಇತ್ತ ರಮೇಶ ಜಾರಕಿಹೊಳಿ ಅಥಣಿಗೆ ಆಗಮಿಸಿ ಗುಪ್ತ ಸಭೆ ನಡೆಸುತ್ತಿದ್ದು ಕುತೂಹಲ ಮೂಡಿಸಿದೆ.


ಅಥಣಿ ಪಟ್ಟಣದ ಹೊರವಲಯದ ಆಪ್ತರ ಮನೆಯಲ್ಲಿ ನಡೆಯುತ್ತಿರುವ ಸಭೆಯಲ್ಲಿ ಅಥಣಿ ಬಿಜೆಪಿ ಅಭ್ಯರ್ಥಿ ಮಹೇಶ ಕುಮತಳ್ಳಿ ಹಾಗೂ



ಕಾಗವಾಡ ಶಾಸಕರ ಸುಪುತ್ರ ಶ್ರೀನಿವಾಸ ಪಾಟೀಲ ಅವರು ಭಾಗಿಯಾಗಿದ್ದಾರೆ. ರಮೇಶ ಜಾರಕಿಹೊಳಿ ಅವರ ಭೇಟಿ ಹಲವು ಆಯಾಮಗಳಿಂದ ಕುತೂಹಲ ಮೂಡಿಸಿದೆ.

## ಈಜಲು ತೆರಳಿದ್ದ ನಾಲ್ವರು ನೀರುಪಾಲು

ಘಟಪ್ರಭಾ: ಅಂಬೇಡ್ಕರ ಜಯಂತಿ ಬಾರ ರಜೆ ಹಿನ್ನಲೆ ಧೂಪದಾಳ ಡ್ಯಾಂ ಗೆ ಈಜಲೂ ಹೋಗಿದ್ದ ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕು ಘಟಪ್ರಭಾ ಪುರ ಸಭೆ ವ್ಯಾಪ್ತಿಯ ಮನಿಷ್ ಬಾರ್'ನ ಆರು ಜನ ಕೆಲಸದ ಹುಡುಗರು. ಜಯಶೀಲ್ ಶಟ್ಟಿ ಎಂಬುವವರಿಗೆ ಸೇರಿದ ಮನಿಷ್ ಬಾರ್, ಒರ್ವ ಪಾರು, ಒರ್ವನ ಸ್ಥಿತಿ ಚಿಂತಾಜನಕ, ಇತರ ನಾಲ್ವರ ಮೃತ್ಯು.



ಪ್ರಾಣಾಪಾಯದಿಂದ ಪಾರು.

1) ವಿಠಲ ಜಾನು ಕೋಕರೆ ವಯಾ 18 ಸಾವು ಬದುಕಿನ ನಡುವೆ ಹೋರಾಟ
2) ರಾಮಚಂದ್ರ ವಿಷ್ಣು ಕೋಕರೆ ವಯಾ 17 ಮೃತರು
3) ಸಂತೋಷ ಬಾಬು ಇಡಗೆ. ವಯಾ: 16
4) ಅಜಯ ಬಾಬು ಜೋರೆ. ವಯಾ: 17
5) ಕೃಷ್ಣ ಬಾಬು ಜೋರೆ, ವಯಾ 16
6) ಆನಂದ ವಿಷ್ಣು ಕೋಕರೆ, ವಯಾ: 16

ಎಲ್ಲ ಬಾಲಕರು ಉತ್ತರ ಕನ್ನಡ ಜಿಲ್ಲೆ ಮುಂಡಗೋಡ ತಾಲೂಕು ಶಿರಗಿರಿಯವರು.

ಘಟಪ್ರಭಾ ಕೆಎಚ್ಐ ಆಸ್ಪತ್ರೆಗೆ 2.30 ರ ಸುಮಾರಿಗೆ ತರಲಾಗಿದೆ.

ಪೋಲಿಸ್ ಅಧಿಕಾರಿಗಳಲ್ಲಿ ನನ್ನ ವಿನಂತಿ ದಯವಿಟ್ಟು ಯಾವುದೆ ಕಾರಣಕ್ಕೂ ಘಟಪ್ರಭಾದ ಯಾವ ಬಾರ್'ಗಳ ಸಿಸಿ ಟಿವಿ ಫುಟೇಜ್ ಅಳಿಸದಂತೆ ಹಾಗೂ ಹಾಳು ಮಾಡದಂತೆ ನೋಡಿಕೊಳ್ಳಿ.

ಸದರಿ ಬಾಲಕಾರ್ಮಿಕರನ್ನು ರಜೆಯ ನಿಮಿತ್ತ ಪ್ರವಾಸಕ್ಕೆ ಬಂದವರೆಂದು ಪ್ರಕರಣ ಮುಚ್ಚಿ ಹಾಕಲು ಪ್ರಭಾವಿಗಳ ಮೂಲಕ ಪ್ರಯತ್ನಿಸಲಾಗುತ್ತಿದೆ. ಒಂದು ವೇಳಿ ಸಿಸಿ ಟಿವಿ ಫುಟೇಜ್ ಲಭ್ಯವಾಗದಿದ್ದ ಪಕ್ಷದಲ್ಲಿ ಅದರ ಹೊಣೆ ನೀವೆ ಹೊರಬೇಕಾಗುತ್ತದೆ. ಕೂಡಲೆ ಸಿಸಿ ಟಿವಿ ಡಾಟಾ ಸ್ಟೋರೇಜ್ ವಶಕ್ಕೆ ಪಡೆಯಲು ಮನವಿ. ನೊಂದ ಕುಟುಂಬಗಳಿಗೆ ದೇವರನ್ನ ಸಾಕ್ಷಿಯಾಗಿಟ್ಟುಕೊಂಡು ನ್ಯಾಯ ಒದಗಿಸೋಣ.

ನಮಗೂ ನಿಮಗೂ ಚಿಕ್ಕ ಮಕ್ಕಳಿಗೆ ಒಂದು ಕ್ಷಣ ಕಣ್ಣು ಮುಚ್ಚಿ ಆ ಮಕ್ಕಳೆ ನಮ್ಮ ಮಕ್ಕಳೆಂದು ಕಲ್ಪನೆ ಮಾಡಿಕೊಂಡು ಮುಂದು ವರೆಯಿರಿ. ಇಲ್ಲದಿದ್ದರೆ ಕಣ್ಣೀರ ಶಾಪದಿಂದ ನಾವ್ಯಾರು ಬಚಾವಾಗಲೂ ಸಾಧ್ಯವಿಲ್ಲ.

## ಪಾರ್ಟಿ ಫಂಡ್ ಕೊಳ್ಳೆ ಹೊಡೆಯಲು ಎಬಿ ಸ್ಪರ್ಧೆ: ರಮೇಶ ಕತ್ತಿ



ಹುಕ್ಕೇರಿ: ತಾಲೂಕಿನ ಎಲಿಮುನ್ನೋಳಿ ಮತ್ತು ಘೋಡಗೇರಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ವಿವಿಧ ಹಳ್ಳಿಗಳಲ್ಲಿ ಶುಕ್ರವಾರ ಮಿಂಚಿನ ಸಂಚಾರ ನಡೆಸಿದ ಮಾಜಿ ಸಂಸದರೂ ಆದ ಡಿಸಿಸಿ ಬ್ಯಾಂಕ್ ಅಧ್ಯಕ್ಷ ರಮೇಶ ಕತ್ತಿ ಅವರು ಹುಕ್ಕೇರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಿಖಿಲ್ ಉಮೇಶ ಕತ್ತಿ ಪರ ಭರ್ಜರಿ ಪ್ರಚಾರ ನಡೆಸಿದರು.

ಬಡಕುಂದ್ರಿ, ಯರಗಟ್ಟಿ, ಹುನ್ನೂರ, ಯರನಾಳ, ಹೊಸೂರ, ಇಂಗಳಿ, ನಿರ್ವಾನಟ್ಟಿ, ಲೇಬರ್ ಕ್ಯಾಂಪ್, ಶಿಂದಿಹಟ್ಟಿ, ಹಿಡಕಲ್ ಡ್ಯಾಮ್, ಹೊಸಪೇಟ, ಹಟ್ಟಿ ಆಲೂರ, ಅಂಕಲಗುಡಿಕೇತ್ರ, ನದಿಗುಡಿಕೇತ್ರ, ಘೋಡಗೇರಿಯಲ್ಲಿ ರಮೇಶ ಕತ್ತಿ ಅವರು ಪ್ರಚಾರ ಸಭೆ ನಡೆಸಿ ಬಿಜೆಪಿ ಪರ ಮತಯಾಚಿಸಿದರು.

## ಸಿದ್ದು, ಡಿಕೆಶಿ ಕಟ್ಟಿಹಾಕಲು ಹೊಸತಂತ್ರ

}ಮೊದಲನೇ ಪುಟದಿಂದ

**ಶೋಕವನದಲ್ಲಿ ಅಶೋಕ**

ಕಂದಾಯ ಸಚಿವ ಆರ್.ಅಶೋಕ ಎಲ್ಲ ಪಕ್ಷಗಳಲ್ಲೂ ಉತ್ತಮ ಸಂಬಂಧ ಇಟ್ಟುಕೊಂಡೇ ಬಂದಿದ್ದಾರೆ. ಪದ್ಮನಾಭನಗರದಲ್ಲಿ ಅನಾಯಾಸವಾಗಿ ಗೆಲ್ಲಲು ಮಾಜಿ ಪ್ರಧಾನಿ ದೇವೇಗೌಡ ಅವರೊಂದಿಗಿನ ಉತ್ತಮ ಸಂಬಂಧ ಕಾರಣ ಎನ್ನುವುದು ಗುಟ್ಟಾಗಿ ಉಳಿದಿಲ್ಲ.

ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಕುಮಾರಸ್ವಾಮಿ, ರೇವಣ್ಣ ಸೇರಿದಂತೆ ಯಾರ ವಿರುದ್ಧವೂ ತೊಡೆ ತಟ್ಟಿದ ಉದಾಹರಣೆಗಳೇ ಇಲ್ಲ. ಆದರೂ ಬಿಜೆಪಿ ಅಧಿಕಾರಕ್ಕೆ ಬಂದಾಗಲೆಲ್ಲಾ ಸರಕಾರದ ಒಕ್ಕಲಿಗ ಪ್ರತಿನಿಧಿಯಾಗಿ ಬಿಂಬಿತವಾಗಿದ್ದರು. ಬೆಂಗಳೂರಿನ ಸಾಮ್ರಾಟ ಎಂದೂ ಹೆಸರಾಗಿದ್ದರು. ಈ ಬಾರಿ ಸಾಮ್ರಾಟ ಪಟ್ಟ ತಪ್ಪಿದ್ದು ಉಂಟು. ಅಶೋಕ ಅವರನ್ನು ಕನಕಪುರದ ಖೆಡ್ಡಾಕ್ಕೆ ತಳ್ಳುವ ವಿಷಯದಲ್ಲಿ ಸಂತೋಷ್ ಅವರ ಸಲಹೆಯೇ ಕಾರಣ ಎಂದು ಬಲ್ಲ ಮೂಲಗಳು ಹೇಳುತ್ತವೆ.

ಪದ್ಮನಾಭನಗರದಿಂದಾಚೆಗೆ ಕನಿಷ್ಠ ಒಕ್ಕಲಿಗ ಪ್ರಾಬಲ್ಯ ಇರುವ ಜಿಲ್ಲೆಗಳಲ್ಲೂ ಅಶೋಕ್ ತಮ್ಮ ಛಾಪು ಮೂಡಿಸಲು ವಿಫಲ ಎನ್ನುವುದಕ್ಕಿಂತ ಪ್ರಯತ್ನವನ್ನೇ ಮಾಡಿಲ್ಲ ಎನ್ನುವುದು ಹೆಚ್ಚು ಸೂಕ್ತ.

ಹಾಗೆ ನೋಡಿದರೆ ಶಿವಕುಮಾರ್ ಸಹೋದರರು ಮತ್ತು ಕುಮಾರಸ್ವಾಮಿ ವಿರುದ್ಧ ಅಬ್ಬರಿಸಿದ್ದು, ತೊಡೆ ತಟ್ಟಿ ತಾಕತ್ತು ಪ್ರದರ್ಶನ ಮಾಡಿದ್ದು, ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ. ರಾಮನಗರ ಜಿಲ್ಲಾ ಉಸ್ತವಾರಿ ಸಚಿವರೂ ಆಗಿದ್ದ ಅಶ್ವತ್ಥನಾರಾಯಣ ಅವರನ್ನು ಕನಕಪುರ ಅಥವಾ ಚನ್ನಪಟ್ಟಣದಲ್ಲಿ ಕಣಕ್ಕಿಳಿಸಬಹುದಾಗಿತ್ತು. ಆದರೆ ವರಿಷ್ಠರ ಕಣ್ಣು ಅಶೋಕ್ ಮೇಲೆ ಬಿದ್ದಿತ್ತು !

ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಉಪಮುಖ್ಯಮಂತ್ರಿ ಪಟ್ಟ ನೀಡಲಾಗಿತ್ತು. ಒಕ್ಕಲಿಗ ಪ್ರಾಬಲ್ಯ ಇರುವ ಹಳೆ ಮೈಸೂರು ಭಾಗದಲ್ಲಿ ಪಕ್ಷವನ್ನು ಬಲಿಷ್ಠವಾಗಿ ಸಂಘಟಿಸುವ ಹೊಣೆಯನ್ನೂ ನೀಡಲಾಗಿತ್ತು. ಎರಡು ವರ್ಷ ಡಿಸಿಎಂ ಸ್ಥಾನ ಅನುಭವಿಸಿದ ಅಶ್ವತ್ಥನಾರಾಯಣ ಅವರಿಂದಲೂ ನಿರೀಕ್ಷಿತ ಫಲ ಸಿಗಲಿಲ್ಲ. ಹೀಗಾಗಿ, ಬೊಮ್ಮಾಯಿ ಮುಖ್ಯಮಂತ್ರಿಯಾಗುತ್ತಿದ್ದಂತೆ ಉಪಮುಖ್ಯಮಂತ್ರಿ ಸ್ಥಾನ ಇಲ್ಲವಾಯಿತು.

ರಾಮನಗರದ ಉಸ್ತುವಾರಿಯನ್ನು ವಹಿಸಿ, ಶಿವಕುಮಾರ್ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರ ತವರು ಜಿಲ್ಲೆ ರಾಮನಗರದಲ್ಲಿ ಪಕ್ಷ ಕಟ್ಟುವ ಹೊಣೆ ವಹಿಸಲಾಯಿತು. ಆದರೆ ಹೈ ಕಮಾಂಡ್ ತೃಪ್ತಿ ಪಡಿಸಲು ಆಗಲಿಲ್ಲ. ರಾಮನಗರದಿಂದ ಅಶ್ವತ್ಥನಾರಾಯಣ ಅವರನ್ನು ಕಣಕ್ಕೆ ಇಳಿಸುತ್ತಾರೆ ಎಂಬ ಸುದ್ದಿ ಹರಿದಾಡಿತ್ತು. ಅದು ಹೇಗೋ ಬಚಾವ್ ಆದರು.

ರಾಮದೇವರ ಬೆಟ್ಟದಲ್ಲಿ ರಾಮಮಂದಿರ ನಿರ್ಮಿಸುವ ಯೋಜನೆ ಪ್ರಕಟಿಸುವ ಮೂಲಕ ಹಿಂದುತ್ವದ ಕಾರ್ಯಸೂಚಿಯನ್ನು ಮುನ್ನೆಲೆಗೆ ತರುವ ಪ್ರಯತ್ನ ನಡೆಸಿದ್ದರು. ಒಟ್ಟಾರೆ ಬಿಜೆಪಿಯ ಒಕ್ಕಲಿಗ ನಾಯಕ ಅಶೋಕ್ ಅಲ್ಲ ' ನಾನು ' ಎಂದು ಗುರುತಿಸಿಕೊಳ್ಳಲು ಸಾಕಷ್ಟು ಕಸರತ್ತು ನಡೆಸಿದ್ದರು.

ಮಂಡ್ಯ ಜಿಲ್ಲೆಯಲ್ಲಿ ಪಕ್ಷದ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ಅಶೋಕ ಅವರಿಗೆ ಜಿಲ್ಲಾ ಉಸ್ತುವಾರಿ ವಹಿಸಲಾಗಿತ್ತು. ಆದರೆ ಕಂದಾಯ ಇಲಾಖೆಯ ಕಾರ್ಯಬಾಹುಳ್ಯದ ನೆಪವೊಡ್ಡಿ ಅಶೋಕ ಜವಾಬ್ದಾರಿಯಿಂದ ಹಿಂದಕ್ಕೆ ಸರಿದಿದ್ದರು. ಅವರ ಈ ನಡೆ ಪಕ್ಷದ ನಾಯಕರ ಅಸಮಾಧಾನಕ್ಕೆ ಕಾರಣವಾಗಿತ್ತು. ಒಂದು ವೇಳೆ, ಕನಕಪುರದಲ್ಲಿ ಯಶಸ್ಸು ಗಳಿಸಿದರೆ ಪಕ್ಷದ ನಾಯಕ ಎಂಬ ಪಟ್ಟ ಮುಂದುವರಿಯುತ್ತದೆ. ವಿಫಲರಾದರೆ ಪಟ್ಟದ ಕಿರೀಟವನ್ನು ವರ್ಗಾಯಿಸಬೇಕಾಗುತ್ತದೆ. ಸಿ.ಟಿ.ರವಿ, ಅಶ್ವತ್ಥನಾರಾಯಣ, ಶೋಭಾ ಕರಂದ್ಲಾಜೆ ಅಥವಾ ಈ ಭಾಗದಲ್ಲಿ ಆಯ್ಕೆಯಾಗಿ ಬರುವ ಶಾಸಕರಿಗೆ ಈ ಭಾಗ್ಯ ಒಲಿದು ಬರಬಹುದು.

**ಅರ್ಥವಾಗದ ಹೈ ಕಮಾಂಡ್ ನಡೆ**

ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದ ಇಬ್ಬರೂ ನಾಯಕರಿಗೆ ಈ ಟಾಸ್ಕ್ ನೀಡಿದ್ದರ ಹಿಂದಿನ ರಹಸ್ಯ ರಹಸ್ಯವಾಗಿಯೇ ಉಳಿದಿದೆ.

ಸಿದ್ದರಾಮಯ್ಯ ಅಥವಾ ಶಿವಕುಮಾರ್ ಅವರನ್ನು ಮಣಿಸಲೇ ಬೇಕು ಎಂಬ ಉದ್ದೇಶವಿದ್ದರೆ ಒಂದೊಂದೇ ಕ್ಷೇತ್ರದಲ್ಲಿ ಟಿಕೆಟ್ ನೀಡಬಹುದಿತ್ತು. ಆಗ ಪ್ರಯತ್ನ ನಡೆಸಲು ಸಾಧ್ಯವಾಗುತ್ತಿತ್ತು. ನಾಮಪತ್ರ ಸಲ್ಲಿಕೆ ಆರಂಭವಾಗುವ 24 ಗಂಟೆ ಮೊದಲು ವಿಪಕ್ಷ ನಾಯಕ ಮತ್ತು ವಿಪಕ್ಷ ಅಧ್ಯಕ್ಷರ ವಿರುದ್ಧ ಎದುರಾಳಿಯಾಗಲು ಸೂಚನೆ ನೀಡಿದ್ದಾದರೂ ಏಕೆ ಎನ್ನುವುದು ಮಿಲಿಯನ್ ಡಾಲರ್ ಪ್ರಶ್ನೆಯಾಗಿ ಉಳಿದಿದೆ. ಉತ್ತರ ಸೂತ್ರಧಾರಿಗೆ ಮಾತ್ರ ಗೊತ್ತು ಎಂದು ಬಿಜೆಪಿಯ ಮುಖಂಡರು ಅಭಿಪ್ರಾಯಪಡುತ್ತಾರೆ.

ಮತದಾನದವರೆಗೆ ಕನಕಪುರ ಮತ್ತು ವರುಣಾ ಕ್ಷೇತ್ರಗಳ ಸುತ್ತವೇ ಎಲ್ಲರ ಚಿತ್ತ ನೆಟ್ಟಿರಬೇಕು.

ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರು ತಮ್ಮ ಕ್ಷೇತ್ರಗಳ ಕಡೆಯೇ ಹೆಚ್ಚಿನ ಗಮನ ಹರಿಸಬೇಕು ಎಂಬುದು ವರಿಷ್ಠರು ಯೋಚನೆ ಎಂದು ಬಿಜೆಪಿ ನಾಯಕರು ಹೇಳುತ್ತಾರೆ.

ಇದೇ ಕಾರಣಕ್ಕೆ ಸಿದ್ದರಾಮಯ್ಯ ಕೋಲಾರ ದಿಂದಲೂ ಸ್ಪರ್ಧಿಸಿದರೆ ವರುಣಾದಲ್ಲಿ ಸೋಲಿನ ಭೀತಿಯಿಂದ ಪಲಾಯನ ಮಾಡಿದ್ದಾರೆ ಎಂದು ಬಿಂಬಿಸುವ ಸಾಧ್ಯತೆಗಳಿವೆ. 2018ರ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಹಾಗೂ ಬಾದಾಮಿ ಕ್ಷೇತ್ರಗಳಲ್ಲಿ ಸಿದ್ದರಾಮಯ್ಯ ಸ್ಪರ್ಧಿಸಿದಾಗ ಇದೇ ರೀತಿಯ ತಂತ್ರ ಹೆಣೆಯಲಾಗಿತ್ತು. ಈ ತಂತ್ರ ಚಾಮುಂಡೇಶ್ವರಿ ಯಲ್ಲಿ ಫಲ ಕೊಟ್ಟಿತ್ತು. ಬಾದಾಮಿಯಲ್ಲಿ ಸಿದ್ದರಾಮಯ್ಯ ಅತ್ಯಲ್ಪ ಮತಗಳ ಅಂತರದಿಂದ ಜಯ ಸಾಧಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

**ಬಂಡಾಯಕ್ಕೆ ಬೆದರಿದ ಕೈ ಪಡೆ**

166 ಅಭ್ಯರ್ಥಿಗಳ ಎರಡು ಪಟ್ಟಿ ಬಿಡುಗಡೆ ಮಾಡಿದ ನಂತರ ಅಂತಿಮ ಪಟ್ಟಿ ಬಿಡುಗಡೆ ಗೆ ಕಾಂಗ್ರೆಸ್ ಹಿಂದೇಟು ಹಾಕುತ್ತಿದೆ. ಬಿಜೆಪಿಯನ್ನು ಕಾಡುತ್ತಿರುವ ಬಂಡಾಯದ ಬಿಸಿಯನ್ನು ಅರಿತ ಕಾಂಗ್ರೆಸ್ ನಾಯಕರು, ಮೂರನೇ ಪಟ್ಟಿ ಪ್ರಕಟಿಸಲು ವಿಳಂಬ ನೀತಿ ಅನುಸರಿಸುತ್ತಿದ್ದಾರೆ.


ಬಾಕಿ ಇರುವ 58 ಕ್ಷೇತ್ರಗಳ ಪೈಕಿ, ಬಹುತೇಕ ಕಡೆ ತೀವ್ರ ಪೈಪೋಟಿ ಎದುರಾಗಿದೆ. ಈ ಕ್ಷೇತ್ರಗಳಲ್ಲಿ ಯಾರಿಗೆ ಟಿಕೆಟ್ ನೀಡಿದರೂ ಬಂಡಾಯ ಭುಗಿಲೇಳುವ ಸಾಧ್ಯತೆ ಇರುವುದರಿಂದಲೇ ಕಾಂಗ್ರೆಸ್ ಮೀನ ಮೇಷ ಎಣಿಸುತ್ತಿದೆ.

ಪಕ್ಷದ ಹಾಲಿ ಶಾಸಕರ ಕ್ಷೇತ್ರಗಳಿಗೂ ಕಾಂಗ್ರೆಸ್ ಟಿಕೆಟ್ ಅಂತಿಮಗೊಳಿಸಿಲ್ಲ. ಲಿಂಗಸಗೂರು ಕ್ಷೇತ್ರದಿಂದ ಶಾಸಕ ಡಿ.ಎಸ್. ಹೂಲಗೇರಿ ಅವರಿಗೇ ಮತ್ತೆ ಟಿಕೆಟ್ ನೀಡಲು ಪಕ್ಷ ನಿರ್ಧಾರವಾಗಿ ಮಾಹಿತಿ ಹೊರ ಬಿದ್ದಿದೆ. ಆದರೆ, ಪುಲಕೇಶಿನಗರ ಕ್ಷೇತ್ರದಿಂದ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಮತ್ತು ಹರಿಹರ ಕ್ಷೇತ್ರದ ಶಾಸಕ ರಾಮಪ್ಪ ಅವರಿಗೆ ಮತ್ತೆ ಟಿಕೆಟ್ ನೀಡುವ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳಲು ನಾಯಕರಿಗೆ ಸಾಧ್ಯವಾಗುತ್ತಿಲ್ಲ. ಕುಂದಗೋಳ ಕ್ಷೇತ್ರದ ಶಾಸಕಿ ಕುಸುಮಾವತಿ ಶಿವಳ್ಳಿ ಅವರಿಗೆ ಟಿಕೆಟ್ ನೀಡದಿರಲು ತೀರ್ಮಾನ ಮಾಡಲಾಗಿದೆ. ಅಲ್ಲಿಯೂ ಬಂಡಾಯ ಎದುರಾದರೆ ಎಂಬ ಆತಂಕ ಮುಖಂಡರನ್ನು ಕಾಡುತ್ತಿದೆ.

ವರುಣ ಕ್ಷೇತ್ರದ ಜೊತೆಗೆ ಕೋಲಾರದಿಂದಲೂ ಕಣಕ್ಕಿಳಿಯಲು ಸಿದ್ದರಾಮಯ್ಯ ಮುಂದಾಗಿದ್ದಾರೆ. ಆದರೆ, ಸಿದ್ದರಾಮಯ್ಯ ಅವರಿಗೆ ಎರಡು ಕ್ಷೇತ್ರಗಳಿಂದ ಟಿಕೆಟ್ ನೀಡುವ ವಿಚಾರದಲ್ಲಿ ನಾಯಕರ ಮಧ್ಯೆ ಒಮ್ಮತ ಅಭಿಪ್ರಾಯ ಮೂಡಿಲ್ಲ. ಸೋಮಣ್ಣ ಎದುರಾಳಿ ಆದ ನಂತರ ಕೋಲಾರದಿಂದಲೂ ಕಣಕ್ಕಿಳಿಯುವ ಅನಿವಾರ್ಯತೆ ಎದುರಾಗಿದೆ ಎಂದು ಅವರ ಆಪ್ತರು ಹೇಳುತ್ತಾರೆ.

ಚನ್ನಪಟ್ಟಣ, ಮದ್ದೂರು, ಚಾಮರಾಜ ಕ್ಷೇತ್ರಗಳಿಗೂ ಕಾಂಗ್ರೆಸ್ ಟಿಕೆಟ್ ಘೋಷಣೆ ಮಾಡಲು ಸಾಧ್ಯವಾಗಿಲ್ಲ. ಚನ್ನಪಟ್ಟಣದಲ್ಲಿ ಸಿ.ಪಿ. ಯೋಗೇಶ್ವರ್ ಅವರ ನಡೆ ಏನೆಂದು ಬಹಿರಂಗಗೊಂಡವಾಗಿಲ್ಲ. ಇಲ್ಲಿ ನಟಿ ರಮ್ಯಾ ಅವರನ್ನು ಕಣಕ್ಕಿಳಿಸಿದರೆ ಹೇಗೆ ಎಂಬ ಬಗ್ಗೆಯೂ ಚರ್ಚೆ ನಡೆದಿದೆ. ಮದ್ದೂರು ಕ್ಷೇತ್ರದಲ್ಲಿ ಕದಲೂರು ಉದಯ್ ಗೌಡ ಹಾಗೂ ಗುರುಚರಣ್ ನಡುವೆ ಪೈಪೋಟಿ ನಡೆಯುತ್ತಿದೆ. ಯಾರಿಗೆ ಟಿಕೆಟ್ ನೀಡಿದರೂ ಒಬ್ಬರು ಸಿಡಿದೇಳುವ ಸಾಧ್ಯತೆ ಇದೆ. ಉದಯ್ ಬಿಜೆಪಿ ಸಂಪರ್ಕದಲ್ಲಿ ಇರುವುದು ತಲೆ ನೋವಾಗಿದೆ.

## ಜಾಗೃತೆಯಿಂದ ಚುನಾವಣಾ ಕರ್ತವ್ಯ ನಿರ್ವಹಿಸಿ: ಎನ್. ವ್ಹಿ ಶಿರಗಾಂವಕರ



ಬೆಳಗಾವಿ: ಚುನಾವಣಾ ಮಾರ್ಗಸೂಚಿಯ ಅನ್ವಯದಂತೆ ಯಾವುದೇ ಗೊಂದಲಕ್ಕೆ ಒಳಗಾಗದೆ ಜಾಗರೂಕತೆಯಿಂದ ಚುನಾವಣಾ ಕರ್ತವ್ಯ ನಿರ್ವಹಿಸಬೇಕು. ಕರ್ತವ್ಯಕ್ಕೆ ನೀಡಿದ ಸಲಕರಣೆ ಹಾಗೂ ನಮೂನೆಗಳ ಕುರಿತು ಮತಗಟ್ಟೆ ಅಧಿಕಾರಿ, ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡಬೇಕು ಎಂದು ಮಾಸ್ಟರ್ ತರಬೇತುದಾರಿಗೆ ಚಿಕ್ಕೋಡಿ ಆರ್. ಡಿ.ಪಿ.ಯು ಕಾಲೇಜು ಉಪನ್ಯಾಸಕರು ಹಾಗೂ ಜಿಲ್ಲಾ ಮಟ್ಟದ ತರಬೇತುದಾರ ಎನ್. ವ್ಹಿ ಶಿರಗಾಂವಕರ ಅವರು ಹೇಳಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ (ಏ.14) ನಡೆದ ಮಾಸ್ಟರ್ ತರಬೇತುದಾರರ (ಂಐಒಖ) ತರಬೇತಿ ಕಾರ್ಯಗಾರದಲ್ಲಿ ಅವರು ಮಾತನಾಡಿದರು.

ಮತಗಟ್ಟೆಯಲ್ಲಿ ಮುಕ್ತ, ನ್ಯಾಯಸಮ್ಮತ, ಶಾಂತಿಯುತ ಮತದಾನ ನಡೆಯುವಂತೆ ನೋಡಿಕೊಳ್ಳಬೇಕು.

ಚುನಾವಣಾ ಕರ್ತವ್ಯ ನಿರ್ವಹಣೆಯಲ್ಲಿ ಅನೇಕ ಗೊಂದಲಗಳು ಎದುರಾಗಬಹುದು ಆದರೆ ಗೊಂದಲಕ್ಕೆ ಒಳಗಾಗದೆ ಚುನಾವಣಾ ಮಾರ್ಗಸೂಚಿಗಳು ಅನ್ವಯ ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಬ್ಯಾಲೆಟ್ ಪೇಪರ್ ಕಲೆಕ್ಟ್, ಜೋಡಣೆ ಸರಿಯಾದ ಮಾದರಿಯಲ್ಲಿ ಮಾಡಲು ಸೂಚಿಸಬೇಕು. ಕರ್ತವ್ಯ ನಿರ್ವಹಣೆ ಸಮಯದಲ್ಲಿ ರಾಜಕಾರಣ ಹಾಗೂ ಸಂಬಂಧಿತ ವಿಷಯದ ಕುರಿತು ಚರ್ಚಿಸಬಾರದು. ಕರ್ತವ್ಯ ನಿರ್ವಹಿಸುವ ಸಮಯದಲ್ಲಿ ಹತ್ತಿರದ ಮನೆಗಳಿಗೆ ಭೇಟಿ ನೀಡಬಾರದು ಎಂದು ತಿಳಿಸಿದರು.

ಮತದಾನಕ್ಕೆ ನಿಗಪಡಿದ ಸಮಯದಲ್ಲಿ ತಾಂತ್ರಿಕ ತೊಂದರೆ ಆಗದಂತೆ ಪೂರ್ವ ತಯಾರಿ ಮಾಡಿಕೊಳ್ಳಬೇಕು. ಮತದಾನಕ್ಕೂ ಮುನ್ನ ಅಣುಕು ಮತ ಚಲಾವಣೆ ಮಾಡುವುದರ ಮೂಲಕ ಮತ ಯಂತ್ರಗಳು ಚಾಲ್ತಿಯಲ್ಲಿದೆ ಎಂದು ಖಾತರಿ ಪಡಿಸಿಕೊಳ್ಳುವಂತೆ ಮತಗಟ್ಟೆ ಅಧಿಕಾರಿಗಳಿಗೆ ಸಿಬ್ಬಂದಿಗಳಿಗೆ ವಿವರಿಸಬೇಕು ಎಂದು ತಿಳಿಸಿದರು.

ಏಜೆಂಟರ ಅಪಾಯಿಂಟ್ ಲೆಟರ್ ಪರಿಶೀಲಿಸಿ, ಪಕ್ಷದ ಏಜೆಂಟರಿಗೆ ಪಾಸ್ ವಿತರಿಬೇಕು. ಮೋಕ್ ಪೋಲ್, ಸರ್ಟಿಫಿಕೆಟ್ ನಲ್ಲಿ ಸಹಿ ಹಾಗೂ ಇವಿಎಂ ಯಂತ್ರಗಳ ನಂಬರ್ ದಾಖಲಿಸಬೇಕು. ಪಕ್ಷಗಳ ಏಜೆಂಟರುಗಳು ಮತದಾರ ಜೊತೆ ಚರ್ಚೆ, ಮೊಬೈಲ್ ಬಳಕೆ ಹಾಗೂ ಮತಗಟ್ಟೆಯಿಂದ ಹೊರಗಡೆ ಹೋಗದಂತೆ ಮತಗಟ್ಟೆ ಅಧಿಕಾರಿಗಳಿಗೆ ಸೂಚಿಸವಂತೆ ನಿರ್ದೇಶನ ನೀಡಬೇಕು ಎಂದು ತರಬೇತುದಾರ ಶಿರಗಾಂವಕರ ಅವರು ಹೇಳಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಮಾಡಿರುವ ಮತದಾನ ಖಚಿತ ಪಡಿಸಿಕೊಳ್ಳುಲು ತಿಳಿಸಬೇಕು. ಮತಯಂತ್ರಗಳನ್ನು ಬಳಸಿ, ಆರ್. ಓ, ಪಿ.ಆರ್. ಓ ಕೌಂಟಿನ ಸೂಪರ್ ವೈಸರ್ ಮೋಕ್ ಪೋಲ್ ಪ್ರಕ್ರಿಯೆ ಮೂಲಕ ಮತ ಯಂತ್ರಗಳ ಚಾಲ್ತಿಯಲ್ಲಿರುವ ಕುರಿತು ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸಬೇಕು ಬಳಿಕ ಮತದಾನದ ಪ್ರಕ್ರಿಯೆ ಪ್ರಾರಂಭಿಸಬೇಕು ಎಂದು ತಿಳಿಸಿದರು.

ಮತ 'ಯಂತ್ರಗಳ ಕಾರ್ಯನಿರ್ವಹಣೆ, ಅಣಕು ಮತದಾನ, ಮತಗಟ್ಟೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳು, ಅರ್ಜಿ ನಮೂನೆಗಳನ್ನು ಭರ್ತಿ ಮಾಡುವ ವಿಧಾನ, ಮತದಾನದ ಸಾಮಗ್ರಿ, ಮತದಾನ ದಿನ ಪಡೆಯಬೇಕಾದ ಸಾಮಗ್ರಿಗಳು, ಮತಗಟ್ಟೆ ತಲುಪಿದ ಮೇಲೆ ಮಾಡುವ ಕೆಲಸ, ಕಂಟ್ರೋಲ್ ಯುನಿಟ್, ಬ್ಯಾಲೆಟ್ ಯುನಿಟ್, ವಿವಿಪ್ಯಾಟ್, ಮತದಾನ ಖಾತ್ರಿ ಮತ್ತು ಪ್ರದರ್ಶಕ ತೆರೆ ಯಂತ್ರಗಳನ್ನು ಜೋಡಿಸುವ ವಿಧಾನ ಕುರಿತು ಕಾರ್ಯಗಾರದಲ್ಲಿ ತರಬೇತಿ ನೀಡಲಾಯಿತು.

# ಜನಾಶೀರ್ವಾದ ಇರುವವರೆಗೆ ನನ್ನನ್ನು ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ: ಸಿದ್ದರಾಮಯ್ಯ

ಮೈಸೂರು: "ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧೆ ಮಾಡಲು ಪಕ್ಷದಿಂದ 11 ಜನ ಅಭ್ಯರ್ಥಿಗಳು ಅರ್ಜಿ ಹಾಕಿದ್ದರು, ಈ ಹನ್ನೊಂದೂ ಜನ ಕೂಡ ಗೆಲ್ಲುವ ಸಾಮರ್ಥ್ಯ ಹೊಂದಿದ್ದಾರೆ, ಆದರೆ ಎಲ್ಲರ ಅಭಿಪ್ರಾಯ ಪಡೆದು ಮಾವಿನಹಳ್ಳಿ ಸಿದ್ದೇಗೌಡರನ್ನು ಅಂತಿಮವಾಗಿ ಹೈಕಮಾಂಡ್ ಅಧಿಕೃತ ಅಭ್ಯರ್ಥಿ ಎಂದು ಘೋಷಣೆ ಮಾಡಿದೆ. ಅವರು ವಲಸಿಗ ಎಂಬ ಅಭಿಪ್ರಾಯ ಯಾರಲ್ಲೂ ಬರಬಾರದು ಕಾರಣ ಒಮ್ಮೆ ಕಾಂಗ್ರೆಸ್ ಸೇರಿದ ಮೇಲೆ ಅವರು ಕಾಂಗ್ರೆಸಿಗ" ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದರು.



ಅವರು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಆಯೋಜಿಸಿದ್ದ ಬೃಹತ್ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ನಾನು 5 ವರ್ಷ ಮುಖ್ಯಮಂತ್ರಿಯಾಗಿ ಸಾಕಷ್ಟು ಒಳ್ಳೆ ಕೆಲಸಗಳನ್ನು ಮಾಡಿದ್ದರೂ ಕೂಡ ಚಾಮುಂಡೇಶ್ವರಿಯ ಜನ ನನ್ನನ್ನು ಸೋಲಿಸಿದರು. ಕಳೆದ ಬಾರಿ ನಾವು 80 ಸ್ಥಾನಗಳನ್ನು ಗೆದ್ದಿದ್ದೆವು. ಬಿಜೆಪಿ 104, ಜೆಡಿಎಸ್ 37 ಸ್ಥಾನ ಗೆದ್ದಿತ್ತು. ನಾಡಿನ ಸಾಮರಸ್ಯ ಹಾಳುಮಾಡುವ, ಧರ್ಮ- ಧರ್ಮಗಳನ್ನು ಎತ್ತಿಕಟ್ಟಿ ಸಮಾಜ ಒಡೆಯುವ, ಅಶಾಂತಿ ಸೃಷ್ಟಿಸುವ ಕೋಮುವಾದಿ ಬಿಜೆಪಿ ಅಧಿಕಾರಕ್ಕೆ ಬರಬಾರದು. ಬಹುತ್ವದ ಭಾರತ ದೇಶದ ಸೌಹಾರ್ದತೆಯನ್ನು ಕಾಪಾಡಿಕೊಂಡು ಹೋಗಬೇಕು ಎಂಬ ಕಾರಣಕ್ಕೆ ಜೆಡಿಎಸ್ ಗೆ ಬೆಂಬಲ ನೀಡಿ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಿದ್ದೆವು" ಎಂದರು.

ಕುಮಾರಸ್ವಾಮಿ ಎಷ್ಟೇ ಪಂಚರತ್ನ ಯಾತ್ರೆ ಮಾಡಿದ್ರೂ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಇನ್ನೊಬ್ಬರ ಹೆಗಲಮೇಲೆ ಕೂತುಕೊಂಡು ಅಧಿಕಾರ ಮಾಡಬೇಕು ಎಂದು ಬಯಸುವವರು ಅವರು. 20 ರಿಂದ 22 ಸ್ಥಾನ ಗೆಲ್ಲಬಹುದು. ಸರ್ಕಾರ ಹೇಗೆ ಮಾಡುತ್ತಾರೆ? ಪಂಚರತ್ನ ಮಾಡಿದ ಕೂಡಲೇ ಬಹುಮತ ಸಿಗುತ್ತಾ? ಅವರಿಗೆ ಬಿಜೆಪಿ ಮತ್ತು ಕಾಂಗ್ರೆಸ್ ಯಾವ ಪಕ್ಷವೂ ಪೂರ್ಣ ಬಹುಮತ ಪಡೆಯಬಾರದು. ಆಗ ಅವರು ಮುಖ್ಯಮಂತ್ರಿಯಾಗಲು ಬರುತ್ತಾರೆ" ಎಂದು ಕುಮಾರಸ್ವಾಮಿ ಅವರನ್ನು ಜರಿದರು.

ಜೆಡಿಎಸ್ ಮತ್ತು ಬಿಜೆಪಿಯವರು ಸೇರಿಕೊಂಡು ಸಿದ್ದರಾಮಯ್ಯನನ್ನು ಮುಗಿಸಬೇಕು ಎಂದು ಹೊರಟಿದ್ದಾರೆ. ಬಿಜೆಪಿ, ಜೆಡಿಎಸ್ ಎಲ್ಲರಿಗೂ ನಾನೇ ಟಾರ್ಗೆಟ್. ಹೀಗೆ ನನ್ನನ್ನು ಟಾರ್ಗೆಟ್ ಮಾಡುತ್ತಿದ್ದಾರಲ್ಲ ಈ ನಾಡಿಗೆ ನಾನು ಮಾಡಿರುವ ಅನ್ಯಾಯವಾದರೂ ಏನು? ನನ್ನ ಮೇಲಿನ ಭಯಕ್ಕೆ ನನ್ನನ್ನು ಮುಗಿಸಲು ಹೊರಟಿದ್ದಾರೆ. ರಾಜ್ಯದ ಜನರ ಆಶೀರ್ವಾದ ಇರುವವರೆಗೆ ಯಾರಿಂದಲೂ ನನ್ನನ್ನು ಮುಗಿಸಲು ಸಾಧ್ಯವಿಲ್ಲ. ನಿಮಗೂ ಸ್ವಾಭಿಮಾನ ಇರಬೇಕು, ಯಾವುದೇ ಕಾರಣಕ್ಕೂ ನಾವು ಗುಂಪುಗಾರಿಕೆ ಮಾಡಲ್ಲ, ಪಕ್ಷ ದ್ರೋಹ ಮಾಡಲ್ಲ, ನಾವೆಲ್ಲರೂ ಸಿದ್ದರಾಮಯ್ಯನ ಕೈಯನ್ನು ಬಲಪಡಿಸುವ ಕೆಲಸ ಮಾಡುತ್ತೇವೆ ಎಂಬ ಸಂಕಲ್ಪವನ್ನು ಇಂದು ಮಾಡಬೇಕು" ಎಂದರು.

ಇಂದು ಕರ್ನಾಟಕದಲ್ಲಿನ ವಾತಾವರಣ ನೋಡಿದರೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದೇ ಬರುತ್ತದೆ. ಬಿಜೆಪಿಯವರು ರಾಜ್ಯವನ್ನು ಹಾಳು ಮಾಡಿದ್ದಾರೆ. ಸ್ವಾತಂತ್ರ್ಯ ನಂತರದಿಂದ 2018ರ ಮಾರ್ಚ್ ವರೆಗೆ ಕರ್ನಾಟಕದ ಮೇಲಿದ್ದ ಒಟ್ಟು ಸಾಲ 2 ಲಕ್ಷದ 42 ಸಾವಿರ ಕೋಟಿ. ಕಳೆದ ಐದೇ ವರ್ಷದಲ್ಲಿ ರಾಜ್ಯದ ಸಾಲ 3 ಲಕ್ಷದ 22 ಸಾವಿರ ಕೋಟಿ ಸಾಲ ಮಾಡಿದ್ದಾರೆ. ಇಲ್ಲಿ ಜೆಟಿಡಿಯೋ, ಬಿಜೆಪಿಯ ಇನ್ಯಾರೋ ಮುಖ್ಯವಲ್ಲ, ರಾಜ್ಯವನ್ನು ಉಳಿಸುವುದು ಮುಖ್ಯ" ಎಂದು ಸಿದ್ದರಾಮಯ್ಯ ಹೇಳಿದರು.

ಇದೇ ವೇಳೆ ಸಿದ್ದರಾಮಯ್ಯ ಅವರು ಮೈಸೂರಿನಲ್ಲಿ ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕ ಸೋಮಶೇಖರ ಹಾಜರಿದ್ದರು.

# ಚುನಾವಣಾಧಿಕಾರಿ (ಆರ್.ಓ) ಕಛೇರಿ ಸುತ್ತ ಸಿ.ಆರ್.ಪಿಸಿ 1973 ಕಲಂ 144 ಪ್ರಕಾರ ನಿಷೇದಾಜ್ಞೆ ಜಾರಿ

ಬೆಳಗಾವಿ: ಬೆಳಗಾವಿ ನಗರದ ಪೊಲೀಸ್ ಕಮೀಷನರೆಟ್ ವ್ಯಾಪ್ತಿಯಲ್ಲಿನ ಬೆಳಗಾವಿ ಮಹಾನಗರ ಪಾಲಿಕೆ (11–ಬೆಳಗಾವಿ ಉತ್ತರ ಹಾಗೂ 12–ಬೆಳಗಾವಿ ದಕ್ಷಿಣ) ಹಾಗೂ ತಹಶೀಲ್ದಾರರು, ಬೆಳಗಾವಿ ತಾಲೂಕು, ಬೆಳಗಾವಿ ರವರ ಕಾರ್ಯಾಲಯದ (ಬೆಳಗಾವಿ ಗ್ರಾಮೀಣ) ಚುನಾವಣಾಧಿಕಾರಿಗಳ ಕಾರ್ಯಾಲಯದ (ಆರ್‌ಓ) ಸುತ್ತ ಮುತ್ತ 100 ಮೀಟರ್ ವ್ಯಾಪ್ತಿಯಲ್ಲಿ ಏಪ್ರಿಲ್.13 2023 ರಂದು 6 ಗಂಟೆಯಿಂದ ಏ.24 2023 ರಂದು ಮಧ್ಯರಾತ್ರಿಯವರೆಗೆ ಜಾರಿಗೆ ಬರುವಂತೆ ಸಿಆರ್‌ಪಿಸಿ 1973 ರ ಕಲಂ 144 ರ ಮೇರೆಗೆ ಷರತ್ತುಗಳನ್ನು ವಿಧಿಸಿ ನಿಷೇದಾಜ್ಞೆಯನ್ನು ಹೊರಡಿಸಲಾಗಿದೆ.

ನಿಷೇಧಾಜ್ಞೆಯನ್ನು ಹೊರಡಿಸಿದ ಸ್ಥಳದಲ್ಲಿ ಮತ್ತು ನಿಗದಿಪಡಿಸಿದ ಸಮಯದಲ್ಲಿ 05 ಕ್ಕಿಂತ ಹೆಚ್ಚು ಜನರು ಗುಂಪು ಸೇರುವುದು, ಮೇರವಣಿಗೆ ಅಥವಾ ಸಭೆ ಸಮಾರಂಭ ಜರುಗಿಸುವುದನ್ನು ನಿಷೇಧಿಸಿದೆ

ಮತ್ತು ನಿಗದಿಪಡಿಸಿದ ಸಮಯದಲ್ಲಿ ಯಾವುದೇ ರೀತಿಯ ವಿಜಯೋತ್ಸವ, ಸಾರ್ವಜನಿಕ ಮೆರವಣಿಗೆ, ಸಾರ್ವಜನಿಕ/ ರಾಜಕೀಯ ಸಭೆ ಸಮಾರಂಭಗಳನ್ನು ನಡೆಸುವುದನ್ನು ನಿಷೇಧಿಸಿದೆ.

ಶವ ಸಂಸ್ಕಾರಕ್ಕೆ ಅಥವಾ ಮದುವೆ ಮತ್ತು ಧಾರ್ಮಿಕ ಮೆರವಣಿಗೆಗಳಿಗೆ ಈ ಆಜ್ಞೆ ಅನ್ವಯಿಸುವುದಿಲ್ಲ.

ಮದುವೆ ಮತ್ತು ಇತರೆ ಧಾರ್ಮಿಕ ಮೆರವಣಿಗೆಗಳು ಯಾವತ್ತೂ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರದಂತೆ ನಿಯಮಗಳನ್ನು ಪಾಲಿಸಬೇಕು ಎಂದು ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಗಳು ಮತ್ತು ಪೋಲಿಸ್ ಆಯುಕ್ತರಾದ ಡಾ॥ ಬೋರಲಿಂಗಯ್ಯ ಅವರು ಆದೇಶಿಸಿದ್ದಾರೆ.

# ಕೃಷಿ ಖುಷಿ ಪುಸ್ತಕ ಬಿಡುಗಡೆ

ಧಾರವಾಡ : ಲೇಖಕ ಸುರೇಶ ಗುದಗನವರ ಅವರ ಕೃಷಿ ಖುಷಿ ಪುಸ್ತಕ ಬಿಡುಗಡೆ ಸಮಾರಂಭವನ್ನು ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ದಿನಾಂಕ: 15.04.2023ರಂದು ಮುಂಜಾನೆ 10.30 ಗಂಟೆಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಭಾಭವನದಲ್ಲಿ ಏರ್ಪಡಿಸಿದೆ.

ಕಸಾಪ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ ಅಧ್ಯಕ್ಷತೆ ವಹಿಸಲಿದ್ದು, ಕೃಷಿ ತಜ್ಞ, ಸಾಹಿತಿ ಈರಯ್ಯ ಕಿಲ್ಲೇದಾರ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಹಿರಿಯ ಸಾಹಿತಿ ಡಾ.ಆರ್.ಬಿ.ಚಿಲುಮಿ ಮುಖ್ಯ ಅತಿಥಿಗಳಾಗಿ, ಪ್ರೊ.ನಿಂಗಪ್ಪ ಮಾಯಕೊಂಡ ಪುಸ್ತಕ ಪರಿಚಯಿಸಲಿದ್ದಾರೆ.

ಸಮಾರಂಭದಲ್ಲಿ ಲೇಖಕ ಸುರೇಶ ಗುದಗನವರ, ಬೆಂಗಳೂರು ಕಾಲ ಪ್ರಕಾಶನದ ಪ್ರಕಾಶಕ ಎಂ.ಆರ್. ಗಿರಿರಾಜು, ಕಸಾಪ ಕೋಶಾಧ್ಯಕ್ಷ ಡಾ.ಎಸ್.ಎಸ್. ದೊಡಮನಿ ಹಾಗೂ ಗೌರವ ಕಾರ್ಯದರ್ಶಿ ಪ್ರೊ. ಕೆ.ಎಸ್.ಕೌಜಲಗಿ ಮತ್ತು ಡಾ.ಜಿನದತ್ತ ಹಡಗಲಿ ಉಪಸ್ಥಿತರಿರುವರು.

# ರಾಜ್ಯ ಮಟ್ಟದ 13 ನೇ ಗಮಕ ಕಲಾ ಸಮ್ಮೇಳನ

ಬೆಳಗಾವಿ 12: ಹದಿಮೂರನೆಯ ಅಖಿಲ ಕರ್ನಾಟಕ ಗಮಕಕಲಾ ಸಮ್ಮೇಳನ ಎಪ್ರಿಲ್ 16 ಮತ್ತು 17 ರಂದು ಬೆಳಗಾವಿಯ ಅನಗೋಳದಲ್ಲಿರುವ ಸಂತ ಮೀರಾ ಆಂಗ್ಲ ಮಾಧ್ಯಮ ಶಾಲೆ ಸಭಾಗೃಹದಲ್ಲಿ ನಡೆಯಲಿದ್ದು ಖ್ಯಾತ ಗಮಕ ಕಲಾ ವಿದ್ವಾಂಸರಾದ ಕರ್ನಾಟಕ ಕಲಾಶ್ರೀ ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್, ಕಾಸರಗೋಡು ಅವರು ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಲಿದ್ದಾರೆ.

ಮತ್ತು ಗಮಕ ಕಲಾ ಪರಿಷತ್ತು,ಬೆಂಗಳೂರು, ಬೆಳಗಾವಿ ಜಿಲ್ಲಾ ಘಟಕ , ಮತ್ತು ಶ್ರೀ ವಾಗ್ದೇವಿ ಗಮಕ ಕಲಾ ಸಂಘ ಬೆಳಗಾವಿ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆಯಲಿರುವ ಈ ಸಮ್ಮೇಳನ ದಿ 16 ರವಿವಾರ ಬೆಳಿಗ್ಗೆ 9.30 ಕ್ಕೆ ಸಮ್ಮೇಳನಾಧ್ಯಕ್ಷರ ಮತ್ತು ಕನ್ನಡ ಕಾವ್ಯಗ್ರಂಥಗಳ ಮೆರವಣಿಗೆಯೊಂದಿಗೆ ಆರಂಭವಾಗಲಿದ್ದು, 10.30 ಕ್ಕೆ ವಿದ್ಯಾಭಾರತಿ ಕರ್ನಾಟಕ ಪ್ರಾಂತ ಅಧ್ಯಕ್ಷರಾದ ಶ್ರೀ ಪರಮೇಶ್ವರ ಹೆಗಡೆ ಅವರು ಸಮ್ಮೇಳನ ಉದ್ಘಾಟಿಸಲಿದ್ದಾರೆ.

ನಿ. ಜಿಲ್ಲಾ ನ್ಯಾಯಾಧೀಶರೂ, ಹಿರಿಯ ಕವಿಗಳೂ ಆದ ಶ್ರೀ ಜಿನದತ್ತ ದೇಸಾಯಿ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದು, ಗಮಕ ಕಲಾ ಪರಿಷತ್ತಿನ ಕಾರ್ಯದರ್ಶಿ ಶ್ರೀ ದಕ್ಷಿಣಾಮೂರ್ತಿಯವರಿಂದ ಪ್ರಾಸ್ತಾವಿಕ ನುಡಿಯನ್ನಾಡಲಿದ್ದಾರೆ. ಗ.ಕ. ಪ. ಅಧ್ಯಕ್ಷರಾದ ಶ್ರೀಮತಿ ಗಂಗಮ್ಮ ಕೇಶವಮೂರ್ತಿ ಸಭೆಯ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ಪತ್ರಕರ್ತ ಸಾಹಿತಿ ಶ್ರೀ ಎಲ್. ಎಸ್. ಶಾಸ್ತ್ರಿ ಮುಖ್ಯ ಅತಿಥಿಗಳಾಗಿರುವರು. ಪಿ. ಬಿ. ಸ್ವಾಮಿ, ಆರ್. ಬಿ. ಕಟ್ಟಿ, ಸುಜಾತಾ ದಫ್ತರದಾರ, ಮತ್ತು ಮಹಾಂತೇಶ ತಾಂವಶಿ ಗೋಕಾಕ ಇವರು ಉಪಸ್ಥಿತರಿರುವರು. ಶ್ರೀಮತಿ ಭಾರತಿ ಭಟ್ಟ, ಶ್ರೀ ಟಿ. ಆರ್. ಗಣಪತಿ ಕಾರ್ಯಕ್ರಮ ನಿರ್ವಹಿಸಲಿದ್ದು ರಾಜೇಶ್ವರಿ ಹಿರೇಮಠ ನಿರೂಪಣೆಗೈಯಲಿದ್ದಾರೆ.

ಮ. 12 ರಿಂದ, ಯುವ ಕಲಾವಿದರ ದೇಶಭಕ್ತಿ ಗೀತೆ ಹಾಗೂ ಗಂಗಮ್ಮ ಕೇಶವಮೂರ್ತಿ ಮತ್ತು ಶಾಂತಾ ಗೋಪಾಲ ಇವರಿಂದ ಡಿವಿಜಿಯವರ ಶ್ರೀರಾಮ ಪರೀಕ್ಷಣಂ ಕಾವ್ಯದ ವಾಚನ ಮತ್ತು ವ್ಯಾಖ್ಯಾನ ನಡೆಯಲಿದೆ. 2.30 ರಿಂದ ವಾಗ್ದೇವಿ ಕಲಾಸಂಘದ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಶ್ರೀಮತಿ ಮಂಜುಳಾ ಭಟ್ಟ ಮಂಚಿ, ಅನಂತಕೃಷ್ಣ ಅವರಿಂದ ಕಾವ್ಯ ವಾಚನ ವ್ಯಾಖ್ಯಾನಗಳು, ಕನಕದಾಸರ ರಾಮಧಾನ್ಯ ಚ–ರಿತ್ರೆ ಗಮಕ ರೂಪಕ, ದಕ್ಷಿಣಾಮೂರ್ತಿಯವ–ರಿಂದ ಪರಿಚಯ ಉಪನ್ಯಾಸ, ಜಾನಪದ ಹಾಡು, ಭರತನಾಟ್ಯ ಮೊದಲಾದ ಕಾರ್ಯಕ್ರಮಗಳು ನಡೆಯಲಿವೆ.ದಿ 17 ಸೋಮವಾರ ಬೆಳಿಗ್ಗೆ 10 ಗಂಟೆಯಿಂದ ವೀಣಾವಾದನ, ಪುರಂದರದಾಸ ನೃತ್ಯರೂಪಕ, ದೇವರನಾಮ, ಕೋಲಾಟ ಅಲ್ಲದೆ ಸುಜಾತ ಗೋಪಿನಾಥ್, ಮುಕ್ತಾ ಶಂಕರ್ ಅವ–ರಿಂದ ಕುಮಾರವ್ಯಾಸ ಭಾರತ ವಾಚನ ವ್ಯಾಖ್ಯಾನ, ಪಲ್ಲವಿ ಭಟ್, ಸಂತೋಷ ಭಾರದ್ವಾಜರಿಂದ ಗೋಕರ್ಣ ಮಹಾತ್ಮೆ ಕಾವ್ಯ ವಾಚನ, ಕಾವ್ಯ ಪರಿಚಯ, ವ್ಯಾಖ್ಯಾನಗಳು ನಡೆಯಲಿವೆ.

# ಪ್ರತಿಶತ ನೂರರಷ್ಟು ಮತದಾನ ಮಾಡಲು ಕೈಜೋಡಿಸಿ: ಸುಭಾಷ್ ಸಂಪಗಾಂವಿ ಕರೆ

ಬೆಳಗಾವಿ: ಗ್ರಾಮದ ಯಾವೊಬ್ಬ ವ್ಯಕ್ತಿಯೂ ಮತದಾನದಿಂದ ವಂಚಿತರಾಗಬಾರದು. ಕಡ್ಡಾಯವಾಗಿ ಮತದಾನದ ಜಾತ್ರೆಯಲ್ಲಿ ಪಾಲ್ಗೊಂಡು ತಮ್ಮ ಹಕ್ಕನ್ನು ಚಲಾಯಿಸುವ ಮೂಲಕ ಪ್ರತಿಶತ ನೂರರಷ್ಟು ಮತದಾನವಾಗುವಲ್ಲಿ ಕೈಜೊಡಿಸಬೇಕು ಎಂದು ಸ್ವೀಪ್ ಅಧ್ಯಕ್ಷರು ಹಾಗೂ ತಾಲೂಕಾ ಕಾರ್ಯನಿರ್ವಾಹಕ ಅಧಿಕಾರಿಗಳಾದ ಎಸ್ ಎಸ್ ಸಂಪಗಾಂವಿ ಅವರು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ವಿಧಾನ ಸಭಾ ಮತಕ್ಷೇತ್ರ ಬೈಲಹೊಂಗಲ–16 ರ ವ್ಯಾಪ್ತಿಗೆ ಒಳಪಡುವ ಕಾರಲಕಟ್ಟಿ ತಾಂಡಾ ದಲ್ಲಿ ಮತದಾನ



ಜಾಗೃತಿ ಮೂಡಿಸುವ ಮೂಲಕ ಜನರಲ್ಲಿ ಮನದಟ್ಟು ಮಾಡಿದರು.

ಗ್ರಾಮಸ್ಥರು ಮತದಾನ ಹೆಚ್ಚಿಸುವಲ್ಲಿ ಪ್ರಯತ್ನಿಸಿ ಹಾಗೂ ಪ್ರತಿಶತ ನೂರರಷ್ಟು ಮತದಾನ ಮಾಡಲು ಕೈಜೋಡಿಸಿ ಎಂದು ಹೇಳಿದರು. ಗ್ರಾಮದ ಯುವಕರು ಉದ್ಯೋಗಕ್ಕಾಗಿ ವಲಸೆ ಹೋಗಿರುತ್ತಾರೆ ಅಂತಹವರನ್ನು ತಾವುಗಳು ಮತದಾನ ದಿವಸ್ ಗ್ರಾಮಕ್ಕೆ ಬರುವಂತೆ ಪ್ರೇರೆಪಿಸಿ ಎಂದು ತಿಳಿಸಿದರು.

ಗ್ರಾಮದ ಹಿರಿಯರಾ ಲಮಾಣಿ ಅವರು ಮಾತನಾಡಿ ಪ್ರಜಾಪ್ರಭುತ್ವ ನಾಡಿನಲ್ಲಿ ಪ್ರತಿಯೊಬ್ಬ ನಾಗರಿಕರು ಕಡ್ಡಾಯವಾಗಿ ಮತದಾನ ಮಾಡಬೇಕು ಮತ್ತು ಸುರಕ್ಷಿತ ಸರಕಾರವನ್ನು ರಚನೆ ಮಾಡಲು ಆಸೆ ಆಮಿಷಗಳಿಗೆ ಓಳಗಾಗದೆ ತಪ್ಪದೇ ಮತದಾನ ಮಾಡುವಂತೆ ಗ್ರಾಮಸ್ಥರಿಗೆ ಸಲಹೆ ನೀಡಿದರು.

ತಾಲೂಕಾ ಚುನಾವಣಾ ನೋಡಲ್ ಎಸ್ ಬಿ ಸಂಗನಗೌಡರ, ಎಸ್ ವ್ಹಿ ಹಿರೇಮಠ ಗ್ರಾಪಂ ಅಭಿವೃದ್ಧಿ ಅಧಿಕಾರಿ ಶ್ರೀಶೈಲಗೌಡ, ಗ್ರಾಮಸ್ಥರಾದ ಪಾಂಡಪ್ಪ ಲಮಾಣಿ, ವೆಂಕಟೇಶ ನಾಯಕ, ಕೃಷ್ಣಾ ಗೌಡರ, ವಿಠ್ಠಲ ಪೂಜೇರ, ಶಂಕರ ಪೂಜೇರ, ಸೋಮಪ್ಪ ಲಮಾಣಿ, ಭಾರತಿ ಗೌಡರ, ಗಂಗಾವತಿ ಗೌಡರ, ಗ್ರಾಪಂ ಸಿಬ್ಬಂದಿಗಳು ಮತ್ತು ಗ್ರಾಮದ ಮುಖಂಡರು ,ಯುವಕರು ಹಾಗೂ ಮಹಿಳೆಯರು ಆಶಾ ಅಂಗನವಾಡಿ ಕಾರ್ಯಕರ್ತೆಯರು ಹಾಜರಿದ್ದರು.

# 1232 ಲೀಟರ್ ಮದ್ಯ ವಶಕ್ಕೆ

ಕೊಪ್ಪಳ: ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ–2023 ಹಿನ್ನೆಲೆಯಲ್ಲಿ ಮಾದರಿ ನೀತಿ ಸಂಹಿತೆ ತಂಡಗಳು, ಪೊಲೀಸ್ ಇಲಾಖೆ ಹಾಗೂ ಅಬಕಾರಿ ಇಲಾಖೆಗಳಿಂದ ಕಾರ್ಯಾಚರಣೆ ಮುಂದುವರೆದಿದೆ.

ಮಾರ್ಚ 19ರಿಂದ ಇಲ್ಲಿವರೆಗೆ ಕೊಪ್ಪಳ ಜಿಲ್ಲೆಯಲ್ಲಿ 4,07,100 ರೂ ಹಣ ವಶಕ್ಕೆ ಪಡೆಯಲಾಗಿದೆ.

226 ಸೀರೆಗಳು, 107 ಟೀಶರ್ಟ್ಸ ಮತ್ತು 170 ಗ್ಯಾಸ್ ಸ್ಟೌವ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ

. ಕೊಪ್ಪಳ ಜಿಲ್ಲೆಯಲ್ಲಿ ಚುನಾವಣೆ ಸಂಬಂಧ ಫ್ಲೈಯಿಂಗ್ ಸ್ಕ್ವಾಡ್ ತಂಡಗಳಿಂದ 08 ಎಫ್.ಐ.ಆರ್‌ಗಳು ದಾಖಲಾಗಿವೆ.

ಏಪ್ರೀಲ್ 12ರಂದು 210.16 ಲೀ ಮೌಲ್ಯದ ಮದ್ಯೆ ವಶ ಸೇರಿದಂತೆ ಮಾರ್ಚ 29ರಿಂದ ಇಲ್ಲಿಯವರೆಗೆ ಒಟ್ಟು 5,70,752.19 ರೂ.ಮೌಲ್ಯದ 1232.66 ಲೀಟರ್ ಮದ್ಯ ವಶಕ್ಕೆ ಪಡೆಯಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಪ್ರಶ್ನೆಪತ್ರಿಕೆ ಸೋರಿಕೆ: ಸೂಕ್ತ ತನಿಖೆಗೆ ಎಬಿವಿಪಿ ಒತ್ತಾಯ

ಬೆಳಗಾವಿ: ರಾಣಿ ಚನ್ನಮ್ಮ ವಿ.ವಿ.ಯ ಪ್ರಶ್ನೆ ಪತ್ರಿಕೆಗಳು ಸೋ–ರಿಕೆಯಾಗಿರುವುದು ಖಂಡನಾರ್ಹ.ಈ ಕೂಡಲೇ ಪ್ರಕರಣ ದಾಖಲಿಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ರಾಜ್ಯದಲ್ಲಿ ಉತ್ತಮ ಹೆಸರನ್ನು ಹೊಂದಿದ್ದು ಗುಣಮಟ್ಟದ ಶಿಕ್ಷಣ, ಉತ್ತಮ ಆಡಳಿತಾತ್ಮಕ ವ್ಯವಸ್ಥೆಗೆ ಹೆಸರುವಾಸಿಯಾಗಿರುವ ವಿಶ್ವವಿದ್ಯಾಲಯವಾಗಿದೆ. ಆದ–'ರೆ ಇತ್ತೀಚಿನ ದಿನಗಳ ಘಟನೆಗಳು ವಿ.ವಿ. ಪ್ರತಿಷ್ಠೆಗೆ ಕಪ್ಪು ಚುಕ್ಕೆ ತರುವಂತಾಗಿರುವುದು ವಿಷಾದನೀಯ



ಸಂಗತಿ ಎಂದು ಪ್ರತಿಭಟನಾಕಾರರು ಹೇಳಿದರು.

ಪರೀಕ್ಷೆಗಳು ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದ ಮಹತ್ವ ಘಟ್ಟಗಳಾಗಿರುತ್ತವೆ , ವಿಶ್ವವಿದ್ಯಾಲಯಗಳು ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ನಡೆಸುವ ಮೂಲಕ ತಮ್ಮ ಆಡಳಿತ ವ್ಯವಸ್ಥೆಯ ಗುಣಮಟ್ಟವನ್ನು ತೋರ್ಪಡಿಸ ಬಹುದಾಗಿರುತ್ತದೆ , ಆದರೆ ಒಂದು ಪರೀಕ್ಷೆಯನ್ನು ಶಿಸ್ತು ಕ್ರಮದೊಂದಿಗೆ ನಡೆಸಲು ಸಾಧ್ಯವಾಗದೆ ಇರುವುದು ವಿ.ವಿಯ ಹದಗೆಟ್ಟ ಆಡಳಿತ ವ್ಯವಸ್ಥೆಯನ್ನು ತೋರಿಸುತ್ತದೆ.

ಬಿಕಾಂ 5 ನೇ ಸೆಮಿಸ್ಟರ್ ನ ಇಂಡಿಂ–ಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ ಎಂಬ ವಿಷಯದ ಪ್ರಶ್ನೆ ಪತ್ರಿಕೆಯಲ್ಲಿ ಸುಮಾರು ಶೇಕಡಾ 50 ರಷ್ಟು ಪ್ರಶ್ನೆಗಳು ಪರೀಕ್ಷೆಗೂ ಮುಂಚಿತವಾಗಿ ಸಾಮಾಜಿಕ ಜಾಲತಾಣದಲ್ಲಿ ಲಿಖಿತ ರೂಪದ ಪ್ರಶ್ನೆಗಳ ಒಂದು ಫೋಟೊ ಹರಿದಾಡಿದೆ. ಇದಲ್ಲದೆ ಬಿಕಾಂ ನ ಎಲ್ಲಾ ಸೆಮಿಸ್ಟರ್ ನ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿರುವುದು ಕಂಡು ಬಂದಿದೆ. ಈ ಪ್ರಶ್ನೆ ಪತ್ರಿಕೆ ಸೋ–ರಿಕೆಯ ಹಿಂದೆ ಒಂದು ವ್ಯವಸ್ಥಿತ ಜಾಲವಿರುವುದು ಎದ್ದು ತೋರುತ್ತಿದೆ ಎಂದು ಪ್ರತಿಭಟನಾಕಾರರು ದೂ–ರಿದರು. ಸಾವಿರಾರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದ್ದು ಇದಕ್ಕೆ ನೇರ ಹೊಣೆ ವಿ.ವಿ ಯ ಉಪ ಕುಲಪತಿಗಳು ಹಾಗೂ ಪರೀಕ್ಷಾಂಗ ಕುಲಸಚಿವರಾಗಿದ್ದು, ಈ ವಿಷಯವನ್ನು ವಿಶ್ವವಿದ್ಯಾಲಯ ಆಡಳಿತ ಮಂಡಳಿ ಗಂಭೀರವಾಗಿ ಪರಿಗಣಿಸಿ ಕೂಡಲೇ ಪ್ರಕರಣ ದಾಖಲಿಸಿ ತಪ್ಪಿತಸ್ಥರನ್ನು ಬಂಧಿಸಿ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಎಬಿವಿಪಿ ಕಾರ್ಯಕರ್ತರು ಒತ್ತಾಯಿಸಿದರು.

# ಒಳ ಮಿಸಲಾತಿ ವರ್ಗೀಕರಣದಲ್ಲಿ ತಪ್ಪು: ತಿದ್ದುಪಡಿಗಾಗಿ ಮನವಿ



ಬೈಲಹೊಂಗಲ: 'ಅಸ್ಪೃಶ್ಯ ಸಮುದಾಯವಾದ ಡೋಹರ ಕಕ್ಕಯ್ಯ ಸಮುದಾಯವನ್ನು ಒಳ ಮಿಸಲಾತಿ ವರ್ಗೀಕರಣದಲ್ಲಿ ತಪ್ಪಾಗಿ ನಾಲ್ಕನೇ ಗುಂಪಿನಲ್ಲಿ (ಅಲೆಮಾರಿ ಜನಾಂಗ) ಶೇ.1ರ ಗುಂಪಿನಲ್ಲಿ ಸೇರ್ಪಡೆ ಮಾಡಲಾಗಿದೆ.

ಕೂಡಲೇ ಅದನ್ನು ತಿದ್ದುಪಡಿಗೊಳಿಸಿ 1ನೇ ಗುಂಪಿನಲ್ಲಿ ಸೇರ್ಪಡೆ ಮಾಡಬೇಕು' ಎಂದು ಒತ್ತಾಯಿಸಿ ಡೋಹರ ಕಕ್ಕಯ್ಯ ಸಮಾಜ ಸೇವಾ ಸಂಘದಿಂದ ಉಪವಿಭಾಗಾಧಿಕಾರಿ ಮೂಲಕ ಸಮಾಜ ಕಲ್ಯಾಣ ಇಲಾಖೆ ಸಚಿವ–ರಿಗೆ ಗುರುವಾರ ಮನವಿ ಸಲ್ಲಿಸಿದರು.

ಅಧ್ಯಕ್ಷ ಈರಣ್ಣ ಹೋಟಕರ ಮಾತನಾಡಿ, 'ಡೋಹರ ಕಕ್ಕಯ್ಯ ಸಮಾಜ 12ನೇ ಶತಮಾನದಿಂದಲೂ ಮೂಲ ಅಸ್ಪೃಶ್ಯ ಸಮಾಜ–ಕ್ಕೆ ಸೇರಿದವರಾಗಿದ್ದಾರೆ. ಮೂಲ ಕುಲ ಕಸಬು ಚರ್ಮ ಹದ ಮಾಡಿಕೊಡವದು.

ಮಾದಿಗರ ಸತ್ತ ಪ್ರಾಣಿಗಳ ಚರ್ಮವನ್ನು ಸುಲಿದ ಕಕ್ಕಯ್ಯ ಸಮಾಜಕ್ಕೆ ನೀಡಿದ ಮೇಲೆ ಚರ್ಮ ಹದಿ ಮಾಡಿ ಸಮಗಾರ ಹರಳಯ್ಯ, ಮಚಗಾರ ಇವ–ರಿಗೆ ಚಪ್ಪಲಿಯನ್ನು ತಯಾರಿಸಲು ನೀಡುತ್ತಿದ್ದರು.

ಈ ಸಮುದಾಯದವರು ಚರ್ಮಗಾರಿಕೆಗಳ ಸಂಬಂಧಪಟ್ಟ ಜಾತಿಗಳೆಂದು ಪರಿಗಣಿಸುತ್ತ ಬರಲಾಗಿದೆ.

ಡಾ.ಬಾಬು ಜಗಜೀವನರಾಮ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮದಲ್ಲಿ ಆದಿ ಜಾಂಬ ನಿಗಮದಲ್ಲಿ ಡೋಹರ ಕಕ್ಕಯ್ಯ ಸಮಾಜ ಸ್ಥಾನ ಕಲ್ಪಿಸಲಾಗಿದೆ.

ರಾಜ್ಯದಲ್ಲಿ ಸಮುದಾಯದ ಜನಸಂಖ್ಯೆ ಸುಮಾರು 2 ಲಕ್ಷ ಇದೆ.

ಈ ವಿಷಯ ರಾಜ್ಯ ಸರ್ಕಾರಕ್ಕೆ ತಿಳಿದಿದ್ದರೂ, ಸಮಾಜವನ್ನು ಅಲೆಮಾರಿ 4ನೇ ಗುಂಪಿನಲ್ಲಿ 88 ಜಾತಿಗಳೊಂದಿಗೆ ಸೇರಿಸಿ ಕೇವಲ 1 ರಷ್ಟು ಮಾತ್ರ ಮಿಸಲಾತಿ ಶಿಪಾರಸ್ಸು ಮಾಡಿದ್ದು ಸಮಾಜಕ್ಕೆ ಘೋರ ಅನ್ಯಾಯ ಮಾಡಿದಂತಾಗಿದೆ. ಕೂಡಲೇ ಸಮುದಾಯವನ್ನು 4ನೇ ಗುಂಪಿನಿಂದ ಶೇ.1 ಮಿಸಲಾತಿ ತೆಗೆದು ಒಳ ಮಿಸಲಾತಿ 1ನೇ ಗುಂಪು ಶೇ.6ರಲ್ಲಿ ಸೇರಿಸಿ ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರಕ್ಕೆ ಮಾಡುವ ರಾಜ್ಯ ಸರ್ಕಾರ ವರದಿ ಕಳುಹಿಸಬೇಕು' ಎಂದು ಆಗ್ರಹಿಸಿದರು.

ಮುಖಂಡರಾದ ಡಿ.ಎಂ. ಕಕ್ಕಯ್ಯನವರ, ನಾರಾಯಣ ಕೆಳಮಕರ, ಎಂ.ಎಂ. ಹೋಟಕರ, ಎ.ಆರ್.ಹೋಟಕರ, ಕೀರ್ತಿ ಹೋಟಕರ, ಎಸ್. ಎಂ.ಪೊಳ, ಸಿ.ಎನ್.ಕಳಂಕರ, ಎಸ್.ಐ.ಕಕ್ಕಯ್ಯನವರ, ಹೆಚ್. ಎಂ.ಕಕ್ಕಯ್ಯನವರ, ಎ.ಎಂ. ಕಕ್ಕಯ್ಯನವರ, ಅನೇಕರು ಇದ್ದರು. ಶಿರಸ್ತೆದಾರ ಎಂ.ಎಸ್.ಗೌಡರ ಮನವಿ ಸ್ವೀಕರಿಸಿದರು.

# ಮತದಾನವು ಒಂದು ಶ್ರೇಷ್ಠ ದಾನ

ಬೆಳಗಾವಿ: ಎಲ್ಲ ದಾನಗಳಂತೆ ಮತದಾನವು ಒಂದು ಶ್ರೇಷ್ಠವಾದ ದಾನವಾಗಿದ್ದು, ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡ ಬೇಕೆಂದು ತಾಲ್ಲೂಕು ಪಂಚಾಯತ



ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಜೇಶ ದಾನವಾಡಕರ್ ಅವರು ಹೇಳಿದರು.

ತಾಲ್ಲೂಕಿನ ಬೆನಕನಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತ ವತಿಯಿಂದ ಗುರುವಾರ ಏಪ್ರಿಲ್ 13 ರಂದು ಆಯೋಜಿಸಿದ್ದ ವಿವಿಧ ಸ್ವಸಹಾಯ ಸಂಘದ ಮಹಿಳೆಯರಿಗೆ ಚಾಲನೆ ಪರವಾಣಿಗೆ ವಿತರಿಸಿ ಅವರು ಮಾತನಾಡಿದರು.

ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಿ ಮತ ಚಲಾಯಿಸುವ ಮೂಲಕ ನಿಮ್ಮ ವ್ಯಾಪ್ತಿಯಲ್ಲಿ ಉತ್ತಮ ನಾಯಕರನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದು ತಿಳಿಸಿದರು.

ಮತದಾರರು ಯಾವುದೇ ಆಮಿಷಕ್ಕೆ ಒಳಗಾಗದೇ ನಿಮ್ಮ ಮತವನ್ನು ಚಲಾಯಿಸಬೇಕು. ಮತದಾನದಿಂದ ಯಾರು ವಂಚಿತರಾಗಬಾರದು ಎಂದು ಸಾರ್ವಜನಿಕರಿಗೆ ತಿಳಿಸಿದರು.

ಈ ಸಂದರ್ಭಗಳಲ್ಲಿ ಸಹಾಯಕ ನಿರ್ದೇಶಕರಾದ (ಪ.ರಾ) ಗಣೇಶ ಕೆ.ಎಸ್. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಸುಜಾತಾ ಬಟಗುರ್ಕಿ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಇದ್ದರು.

# ಬಿಜೆಪಿಯ ಗೆಲುವು ದ್ವಿಗ್ವಿಜಯದ ದಾಖಲೆಯ ಗೆಲುವಾಗಲಿದೆ: ನಡಹಳ್ಳಿ

ತಾಳಿಕೋಟೆ: ತಾಲೂಕಿನಲ್ಲಿ ಆಗಿರುವ ಅಭಿವೃದ್ಧಿ ಎಲ್ಲರಿಗೂ ಕಾಣುತ್ತಿದೆ ಈ ಭಾರಿ ಇಲ್ಲಿಯ ಜನರು ಅಭಿವೃದ್ಧಿ ಮತಕೊಡುತ್ತಾರೆ ವಿನಃ ಅನುಕಂಪಕ್ಕೆ ಅಲ್ಲಾ ಈ ಭಾರಿ ಮುದ್ದೇಬಿಹಾಳ ಮತಕ್ಷೇತ್ರದಲ್ಲಿಯ ಬಿಜೆಪಿಯ ಗೆಲವು ದ್ವಿಗ್ವಿಜಯದ ದಾಖಲೆಯ ಗೆಲವು ಆಗಲಿದೆ ಎಂದು ಕರ್ನಾಟಕ ಆಹಾರ ಮತ್ತು ನಾಗ–ರಿಕ ಸರಬರಾಜು ನಿಗಮದ ಅಧ್ಯಕ್ಷ ಶಾಸಕ ಬಿಜೆಪಿ ಪಕ್ಷದ ಅಭ್ಯರ್ಥಿ ಎ.ಎಸ್.ಪಾಟೀಲ(ನಡಹಳ್ಳಿ) ಅವರು ಹೇಳಿದರು.

ಮಿಣಜಗಿ ಗ್ರಾಮದಲ್ಲಿ ಕಾಂಗ್ರೇಸ್ ಮುಖಂಡರುಗಳಾದ ಪಿಕೆಪಿಎಸ್ ಹಾಗೂ ಗ್ರಾಂಪಂ ಮಾಜಿ ಅಧ್ಯಕ್ಷ ಸಿ.ಎಸ್.ಬಿರಾದಾರ, ಪ್ರಭುಗೌಡ ಬಿರಾದಾರ, ಎಸ್.ಡಿ.ಎಂ.ಸಿ.ಅಧ್ಯಕ್ಷ



ಸಂಗನಗೌಡ ಬಿರಾದಾರ, ಗುರುಲಿಂಗಪ್ಪಗೌಡ ಪಾಟೀಲ, ಮಲ್ಲು ಬಾದೋಡಗಿ ಕುಟುಂಬದವರು ನೂರಾರು ಕಾರ್ಯಕರ್ತರೊಂದಿಗೆ ಬಿಜೆಪಿ ಪಕ್ಷಕ್ಕೆ ಸೇರ್ಪಡೆಯ ಕಾರ್ಯಕ್ರಮದಲ್ಲಿ ಬಿಜೆಪಿ ಪಕ್ಷದ ಶಾಲು ಹೊದಿಸಿ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡುತ್ತಿದ್ದ ಅವರು ಕಳೆದ 20 ವರ್ಷಗಳಿಂದ ಪಂಚಮಸಾಲಿ ಸಮೂದಾಯಕ್ಕೆ ಮಿಸಲಾತಿ ಕೊಡಬೇಕೆಂದು ನಡೆದ ಹೋರಾಟಕ್ಕೆ ನಮ್ಮ ಬಿಜೆಪಿ ಸರ್ಕಾರ ಮಿಸಲಾತಿ ಕೊಟ್ಟಿದೆ ಇದು ಐತಿಹಾಸಿಕವಾದಂತಹ ತಿರ್ಮಾನವಾಗಿದೆ.

ಈ ಹೋರಾಟದ ನೇತೃತ್ವ ವಹಿಸಿದ್ದ ಪಂಚಮಸಾಲಿ ಸಮೂದಾಯದ ಜಗದ್ಗುರುಗಳಾದ ಶ್ರೀ ಜಯಮೃತ್ಯುಂಜಯ ಮಹಾಸ್ವಾಮಿಗಳು ದೊಡ್ಡ ಪ್ರಮಾಣದಲ್ಲಿ ವಿಜಯೋತ್ಸವ ಆಚರಿಸಬೇಕೆನ್ನು ವಷ್ಟರಲ್ಲಿ ಚುನಾವಣೆಯ ನೀತಿ ಸಂಹಿತೆ ತಡೆಯೊಡ್ಡಿದಂತಾಗಿದೆ ಹೀಗಾಗಿ ಚುನಾವಣೆಯ ನಂತರದಲ್ಲಿ ಜಗದ್ಗುರುಗಳಿಗೆ ನಮ್ಮ ಕ್ಷೇತ್ರದಲ್ಲಿಯೇ ದೊಡ್ಡ ಮಟ್ಟದಲ್ಲಿ ಸನ್ಮಾನ ಮಾಡುವಂತಹ ಕಾರ್ಯ ನಡೆಯಲಿದೆ. ಈ ಕಾರ್ಯದಲ್ಲಿ ಸುಮಾರು 1 ಲಕ್ಷಕ್ಕೂ ಅಧಿಕ ಪಂಚಮಸಾಲಿ ಸಮೂದಾಯದ ಜನರು ಭಾಗವಹಿಸುವಂತಹ ಕೆಲಸವಾಗಲಿದೆ ಎಂದ ಅವರು ಈ ಹಿಂದೆ ಈ ಕ್ಷೇತ್ರವನ್ನು 25 ವರ್ಷಗಳು ಆಳಿದಂತಹ ವ್ಯಕ್ತಿ ನಾನು ಮಾಡಿರುವ ಅಭಿವೃದ್ಧಿಯ ಪರ್ವಕ್ಕೆ ಜನರ ಎದುರಿಗೆ ಹೋಗಿ ಮತ ಕೇಳಲಿಕ್ಕೆ ದಾರಿ ಇಲ್ಲದಕ್ಕೆ ಇದು ನನ್ನ ಕೊನೆಯ ಚುನಾವಣೆ ಕೊನೆಯ ಚುನಾವಣೆ ಎಂದು ಅನುಕಂಪ ಗಿಟ್ಟಿಸಿಕೊಳ್ಳಲು ಹೊರಟಿದ್ದಾರೆ ಆದರೆ ನಮ್ಮ ಕ್ಷೇತ್ರದ ಜನರು ಜಾಣರಿದ್ದಾರೆ ಅಭಿವೃದ್ಧಿ ಕೆಲಸ ಯಾರು ಮಾಡಿದ್ದಾರೋ ಅವರನ್ನು ಬೆಂಬಲಿಸುತ್ತಾರೆ.

ಅನುಕಂಪದ ಹಿಂದೆ ಹೋಗುವಂತಹ ಜನರು ನಮ್ಮಬಳಿ ಇಲ್ಲಾ ಇವರಿಗೇನಾದರೂ ಮತ ಕೊಟ್ಟರೆ ಕೊನೆಯ 5 ವರ್ಷದ ವರೇಗೂ ಬೆಂಗಳೂರಿನಲ್ಲಿ ಮಲಕೊಂಡರೆ ನಮ್ಮನ್ನೋಡೋರು ಯಾರು ಎಂದು ಜನರು ಪ್ರಶ್ನೀಸುವಂತಾಗಿದೆ ಈಗಾಗಲೇ ಜನರು ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವವನ್ನೇ ಹರಿಸಿರುವಂತಹ ನಮ್ಮ ಕಷ್ಟಕ್ಕೆ ಆಗುವಂತಹ ಎ. ಎಸ್.ಪಾಟೀಲ(ನಡಹಳ್ಳಿ) ಅವರಿಗೆ ಮತ ನೀಡಬೇಕೆಂದು ತಿರ್ಮಾನ ಮಾಡಿರುವದು ಎಲ್ಲ ಸರ್ವೇ ರೀಪೋರ್ಟಗಳು ಹೇಳುತ್ತಿವೆ.

# ನಾಳೆಯಿಂದ ದೇವಲಾಪೂರದಲ್ಲಿ ಶ್ರೀ ಉಡಚಮ್ಮಾದೇವಿ ಜಾತ್ರೆ

ಬೈಲಹೊಂಗಲ: ತಾಲೂಕಿನ ಸುಕ್ಷೇತ್ರ ದೇವಲಾಪೂರ ಗ್ರಾಮದ ಶ್ರೀ ಉಡಚಮ್ಮದೇವಿ 16 ನೇ ವರ್ಷದ ಜಾತ್ರಾ ಮಹೋತ್ಸವ ಹಾಗೂ ಅಮ್ಮನ ಉತ್ಸವ–2023 ಏ. 18 ರವರೆಗೆ ಇಂಚಲದ ಶ್ರೀ ಶಿವಯೋಗೀಶ್ವರ ಸಾಧು ಸಂಸ್ಥಾನ ಮಠದ ಪೂಜ್ಯ ಡಾ. ಶಿವಾನಂದ ಭಾರತಿ ಶ್ರೀಗಳ ಸಾನಿಧ್ಯ, ಬೈಲಹೊಂಗಲದ ಶಿವಾನಂದ ಮಠದ ಪೂಜ್ಯ ಮಹಾದೇವ ಸರಸ್ವತಿ ಸ್ವಾಮೀಜಿ ಅಧ್ಯಕ್ಷತೆ ಹಾಗೂ ನೇಸರಗಿ–ಮಲ್ಲಾಪೂರದ ಶ್ರೀ ಗಾಳೇಶ್ವರ ಮಠದ ಪೂಜ್ಯ ಚಿದಾನಂದ ಸ್ವಾಮೀಜಿ ನೇತೃತ್ವದಲ್ಲಿ ಸಡಗರ ಸಂಭ್ರಮದಿಂದ ಜರುಗಲಿದೆ.

ದಿ. 15 ರಂದು ಬೆಳಿಗ್ಗೆ ಶ್ರೀ ಉಡ–'ಚಮ್ಮಾ ದೇವಿಗೆ ಮಹಾಭಿಷೇಕ, 8–00 ಘಂಟೆಗೆ ದೇವಿಯ ಪಲ್ಲಕ್ಕಿ ಉತ್ಸವ, ಹೊನ್ನಾಟ, ಸಂಜೆ 5–00 ಘಂಟೆಗೆ ಗಜಾ ವಾಯ್ಸ ಕಮೀಟಿ



ಆಶ್ರಯದಲ್ಲಿ ಟಗರಿನ ಕಾಳಗ, 6–30 ಕ್ಕೆ ಭಕ್ತಿ ಸಂಗೀತ ಕಾರ್ಯಕ್ರಮ, 7–30 ಕ್ಕೆ ವಿವಿಧ ಶ್ರೀಗಳಿಂದ ಪ್ರವಚನ, ರಾತ್ರಿ 10–30 ಕ್ಕೆ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ.


ದಿ. 16 ರಂದು ಬೆಳಿಗ್ಗೆ ಮಹಾಭಿಷೇಕ, ದೇವಿಯ ಹೊನ್ನಾಟ, ಸಾಯಂಕಾಲ 7–30 ಕ್ಕೆ ಶ್ರೀಗಳಿಂದ ಪ್ರವಚನ, ರಾತ್ರಿ 10–30 ಕ್ಕೆ ಶ್ರೀ ಮಹರ್ಷಿ ವಾಲ್ಮೀಕಿ ಯುವ ನಾಟ್ಯ ಸಂಘ ಹೊನಗಾ–ಹೆಗ್ಗೇರಿ ಅವರಿಂದ ಬೆಟ್ಟಕ್ಕೆ ಬೆಂಕಿ ಹಚ್ಚಿದ ಹುಲಿ ಸಾಮಾಜಿಕ ನಾಟಕ ಪ್ರದರ್ಶನವಾಗಲಿದೆ.

ದಿ. 17 ರಂದು ಬೆಳಿಗ್ಗೆ ಮಹಾಭಿಷೇಕ, 9–00 ಘಂಟೆಗೆ ಉಡಚಮ್ಮಾದೇವಿ ಗೆಳೆಯರ ಬಳಗದಿಂದ ಮುಕ್ತ ರಂಗೋಲಿ ಸ್ಪರ್ಧೆ, ಸಾಯಂಕಾಲ 4–00 ಘಂಟೆಗೆ ಬಯಲುಗಣದ ಕುಸ್ತಿಗಳು, ಸಾಯಂಕಾಲ 6–00 ಘಂಟೆಗೆ ದೇವಿಗೆ ಸಹಸ್ರ ದೀಪೋತ್ಸವ, 7–00 ಘಂಟೆಗೆ ಭಕ್ತಿ ಸಂಗೀತ ಕಾರ್ಯಕ್ರಮ, ಶ್ರೀಗಳಿಂದ ಪ್ರವಚನ, ರಾತ್ರಿ 10–30 ಕ್ಕೆ ಕೊತಬಾಳದ ವೈವಿಧ್ಯಮಯ ಜಾನಪದ ಕಲಾ ತಂಡ ಅವರಿಂದ ಜಾನಪದ ಜಾತ್ರೆ ವೈಭವದಿಂದ ನಡೆಯಲಿದೆ.

ದಿ. 18 ರಂದು ಬೆಳಿಗ್ಗೆ ಮಹಾಭಿಷೇಕ, ಮುಂಜಾನೆ 9–00 ಘಂಟೆಗೆ ಬೆಳ್ಳಿಯ ರಥದಲ್ಲಿ ಶ್ರೀಗಳ ಹಾಗೂ ಆನೆಯ ಮೇಲೆ ಶ್ರೀ ಉಡಚಮ್ಮಾದೇವಿ ಮೂರ್ತಿ ಮೆರವಣಿಗೆ, ಸಾಯಂಕಾಲ 5–00 ಘಂಟೆಗೆ ಶ್ರೀ ಉಡಚಮ್ಮಾದೇವಿಯ ಮಹಾ ರಥೋತ್ಸವ ಜರುಗಲಿದೆ.

ರಾತ್ರಿ 10–30 ಕ್ಕೆ ದೇವಲಾಪೂರದ ಶ್ರೀ ಉಡಚಮ್ಮಾದೇವಿ ತರುಣ ನಾಟ್ಯ ಸಂಘ ಇವರಿಂದ ಮನೆಗೆ ತಕ್ಕ ಮಗ ಸಾಮಾಜಿ–ಕ ನಾಟಕ ಪ್ರದರ್ಶನವಾಗಲಿದ್ದು ನಿತ್ಯ ಮಕ್ಕಳಿಂದ ಸಾಂಸ್ಕೃತಿ–ಕ ಕಾರ್ಯಕ್ರಮಗಳು ಜರುಗಲಿವೆ ಎಂದು ಶ್ರೀ ಉಡಚಮ್ಮಾದೇವಿ ದೇವಸ್ಥಾನ ಜೀರ್ಣೋದ್ಧಾರ ಟ್ರಸ್ಟ ಕಮೀಟಿ ಪ್ರಕಟಣೆಯಲ್ಲಿ ತಿಳಿಸಿದೆ.

# ಘಟಪ್ರಭಾ ನದಿಗೆ ಈಜಲು ಹೋಗಿದ್ದ ನಾಲ್ವರು ಯುವಕರು ನೀರುಪಾಲು



ಬೆಳಗಾವಿ: ಘಟಪ್ರಭಾ ನದಿಗೆ ಈಜಲು ಹೋಗಿದ್ದ ನಾಲ್ವರು ಯುವಕರು ಸಾವನ್ನಪ್ಪಿರುವ ಘಟನೆ ಬೆಳಗಾವಿ ಯಲ್ಲಿ ನಡೆದಿದೆ.

ಗೋಕಾಕ್ ತಾಲೂಕಿನ ಧೂಪದಾಳ ಪಟ್ಟಣದ ಪ್ರವಾಸಿ ಮಂದಿರದ ಬಳಿ ಈ ಘಟನೆ ನಡೆದಿದೆ.

ಮೃತರನ್ನು ಉತ್ತರ ಕನ್ನಡದ ಮುಂಡಗೋಡ ತಾಲೂಕಿನ ಹಿರಿಗೆರೆ ಗ್ರಾಮದ 18 ವರ್ಷದ ಸಂತೋಷ ಬಾಬು ಇಟಗಿ ಮತ್ತು ಅಜಯ್ ಬಾಬು ಜೋರೆ, 22 ವರ್ಷದ ಕೃಷ್ಣಾ ಬಾಬು ಜೋರೆ ಹಾಗೂ 19 ವರ್ಷದ ಆನಂದ ಕೋಕರೆ ಎಂದು ಗುರುತಿಸಲಾಗಿದೆ.

ಬಾರ್ ಗೆ ರಜೆ ಇದ್ದ ಕಾರಣ ಮಧ್ಯಾಹ್ನ ಈಜಾಡಲೆಂದು ಆರು ಯುವಕರ ತಂಡ ನದಿಗೆ ಹೋಗಿತ್ತು. ಈ ವೇಳೆ ನದಿಯಲ್ಲಿ ಮುಳುಗಿ ನಾಲ್ವರು ಯುವಕರು ಸಾವನ್ನಪ್ಪಿದ್ದಾರೆ.

ಮೃತರು ಘಟಪ್ರಭಾದ ಬಾರ್ ಒಂದರಲ್ಲಿ ಕೆಲಸ ಮಾಡುತ್ತಿದ್ದು ಎನ್ನಲಾಗಿದೆ. ಘಟಪ್ರಭಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# ಭೋವಿ ಸಮುದಾಯದ ಮುಖಂಡರಿಗೆ ಟಿಕೆಟ್ ನೀಡಿಲ್ಲ: ಇಮ್ಮಡಿ ಸಿದ್ಧರಾಮೇಶ್ವರ ಶ್ರೀಗಳು ಅಸಮಾಧಾನ

ಚಿತ್ರದುರ್ಗ: ಮುಂದಿನ ವಿಧಾನ ಸಭೆ ಚುನಾವಣೆಗೆ ಭೋವಿ ಸಮುದಾಯದ ಮುಖಂಡ–ರಿಗೆ ಟಿಕೆಟ್ ನೀಡದ ಹಿನ್ನೆಲೆ ರಾಷ್ಟ್ರೀಯ ಪಕ್ಷಗಳ ವಿರುದ್ಧ ಭೋವಿ ಮಠದ ಇಮ್ಮಡಿ ಸಿದ್ಧರಾಮೇಶ್ವರ ಶ್ರೀಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಭೋವಿ ಮಠದ ಇಮ್ಮಡಿ ಸಿದ್ಧರಾಮೇಶ್ವರ ಶ್ರೀಗಳು ಸುದ್ದಿಗೋಷ್ಠಿ ನಡೆಸಿ, ಮಾತನಾಡಿದ ಅವರು ಈ ಹಿಂದೆ 8 ರಿಂದ 10 ಭೋವಿ ಸಮುದಾಯದ ಅಭ್ಯರ್ಥಿಗಳಿಗೆ ಟಿಕೆಟ್ ನೀಡುತ್ತಿದ್ದರು.



ಈ ಬಾರಿ ಎರಡೂ ರಾಷ್ಟ್ರೀಯ ಪಕ್ಷದ ವರಿಷ್ಠರಿಗೆ ಭೋವಿ ಸಮಾಜದ ಮುಖಂಡರಿಗೆ ಟಿಕೆಟ್ ನೀಡುವಂತೆ ಮನವಿ ಮಾಡಿದ್ದೆವು. ಆದರೆ ಈ ಬಾರಿ ಸಮುದಾಯವನ್ನು ಎರಡು ರಾಷ್ಟ್ರೀಯ ಪಕ್ಷಗಳು ಕಡೆಗಣನೆ ಮಾಡಿದ್ದಾರೆ ಅದರಲ್ಲೂ ಪ್ರಮುಖವಾಗಿ ಅರವಿಂದ ಲಿಂಬಾವಳಿ ಮತ್ತು ಗೂಳಿಹಟ್ಟಿ ಶೇಖರ್ ಇಬ್ಬರು ಬಿಜೆಪಿ ಅಧಿಕಾರಕ್ಕೆ ಬರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ, ಅವರನ್ನು ಕಡೆಗಣನೆ ಮಾಡಿದ್ದಾರೆ.

ಅಷ್ಟೇ ಅಲ್ಲದೇ ಕಾಂಗ್ರೆಸ್ ಪಕ್ಷದಿಂದ ಅಖಂಡ ಶ್ರೀನಿವಾಸ್ ಅವರು ಹೆಚ್ಚಿನ ಅಂತರದಿಂದ ದಾಖಲೆಯ ಗೆಲುವು ಸಾಧಿಸಿದ್ದರು. ಅವರನ್ನು ಸಹ ಕಡೆಗಣನೆ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಗ್ರಂಥಾಲಯದಲ್ಲಿ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ ಜಯಂತಿ: ಪುಸ್ತಕ ಪ್ರದರ್ಶನ

ಬೆಳಗಾವಿ: ನಗರದ ಕೇಂದ್ರ ಗ್ರಂಥಾಲಯದಲ್ಲಿ ಮಹಾನ್ ನಾಯಕ, ಸಂವಿಧಾನ ಶಿಲ್ಪಿ,ಮಹಾ ಮಾನವತಾವಾದಿ ಡಾ.ಬಿ.ಆರ್ ಅಂಬೇಡ್ಕರ್ ಅವರ ಜಯಂತಿಯನ್ನು ಶ್ರದ್ಧೆ ಭಕ್ತಿಯಿಂದ ಆಚರಿಸಲಾಯಿತು.

ಗ್ರಂಥಾಲಯದಲ್ಲಿ ಸಿಬ್ಬಂದಿ ಮತ್ತು ಓದುಗರು ಅವರಿಗೆ ಪೂಜೆ ಸಲ್ಲಿಸಿ ಗೌರವ ನಮನ ಸಲ್ಲಿಸಿದರು.

ಅದೇ ರೀತಿ ಪ್ರತಿ ವರ್ಷದಂತೆ ಈ ಬಾರಿಯೂ ಜಿಲ್ಲಾಡಳಿತ ವತಿಯಿಂದ ಅಂಬೇಡ್ಕರ್ ಗಾರ್ಡನ್ ದಲ್ಲಿ ಡಾ. ಅಂಬೇಡ್ಕರ್ ಜಯಂತಿಯನ್ನು ಆಚ–ರಿಸುವ ನಿಮಿತ್ತ, ಸಾರ್ವಜನಿಕ ಗ್ರಂಥ–ಾಲಯ ಇಲಾಖೆ, ನಗರ ಕೇಂದ್ರ ಗ್ರಂಥ–ಾಲಯ ಬೆಳಗಾವಿ, ವತಿಯಿಂದ ಅಂಬೇಡ್ಕರ್ ಅವರ ಜೀವನ, ಸಾಧನೆ,



ಮತ್ತು ಪ್ರೇರಣೆಯ ಬಗ್ಗೆ ಮಾಹಿತಿ ನೀಡುವ ಪುಸ್ತಕಗಳ ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು.

ಈ ಪುಸ್ತಕ ಪ್ರದರ್ಶನವನ್ನ ಮಾನ್ಯ ಜಿಲ್ಲಾಧಿಕಾರಿಗಳು,ಶ್ರೀ ನಿತೇಶ್ ಪಾಟೀಲ್ ಅವರು ಜ್ಯೋತಿ ಬೆಳಗುವ ಮೂಲಕ ಉದ್ಘಾಟನೆ ಮಾಡಿದರು. ಅವರೊಂದಿಗೆ ಪೊಲೀಸ್ ಆಯುಕ್ತರಾದ ಡಾ.ಬೋರಲಿಂಗಯ್ಯ ಅವರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸಂಜೀವ್ ಪಾಟೀಲ್ ಅವರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಹರ್ಷಲ್ ಭೋಯರ್ ಅವರು, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀ ಬಸವರಾಜ ರಾಯವ್ವಗೋಳ ಮತ್ತು ಇನ್ನಿತರ ಅಧಿಕಾರಿಗಳು,ಗಣ್ಯ ಮಾನ್ಯರು ದೀಪ ಬೆಳಗಿಸಿ ಅಂಬೇಡ್ಕರ್ ಅವರಿಗೆ ಗೌರವ ನಮನ ಸಲ್ಲಿಸಿದರು.

ನಂತರ ಪುಸ್ತಕ ಪ್ರದರ್ಶನ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂಧರ್ಭದಲ್ಲಿ ನಗರ ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯ ಬೆಳಗಾವಿಯ ಎಲ್ಲ ಸಿಬ್ಬಂದಿ,ಸಾರ್ವಜನಿಕರೂ ಹಾಜರಿದ್ದರು.

# ಬಿಜೆಪಿ ಮಾಜಿ ಸಚಿವ ಶಶಿಕಾಂತ್ ನಾಯ್ಕ್ ರಾಜೀನಾಮೆ

ಬೆಳಗಾವಿ: ಹುಕ್ಕೇರಿ ಮತಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಬಯಸಿದ್ದ ಮಾಜಿ ಸಚಿವ ಶಶಿಕಾಂತ್ ನಾಯ್ಕ್ ಬಿಜೆಪಿಗೆ ಗುಡ್ ಬೈ ಹೇಳಲು ಮುಂದಾಗಿದ್ದಾರೆ. ಕತ್ತಿ ಕುಟುಂಬದ ಕಿರುಕುಳಕ್ಕೆ ಬೇಸತ್ತು ರಾಜೀನಾಮೆ ನೀಡುತ್ತಿದ್ದೇನೆ ಎಂದು ಮಾಜಿ ಸಚಿವ ಶಶಿಕಾಂತ್ ನಾಯ್ಕ್ ತಿಳಿಸಿದ್ದಾರೆ.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಳೆದ ಇಪ್ಪತ್ತು ವರ್ಷಗಳಿಂದ ಬಿಜೆಪಿಯಲ್ಲಿ ಕೆಲಸ ಮಾಡುತ್ತ ಬಂದಿದ್ದೇನೆ.

ಜಿಲ್ಲೆಯಲ್ಲಿ ಬಿಜೆಪಿಯನ್ನು ಹಳ್ಳಿಮಟ್ಟದಿಂದ ಬೆಳೆಸಲು ಬಾಬಾಗೌಡ ಪಾಟೀಲ್ ಜೊತೆ ಕೆಲಸ ಮಾಡಿದ್ದೇನೆ. ಕೇವಲ ಒಂದು ಸಲ ಮಾತ್ರ ನನಗೆ ಹುಕ್ಕೇರಿ ಮತಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಕೊಟ್ಟಿದೆ.

ಆ ವೇಳೆ ದಿ.ಉಮೇಶ್ ಕತ್ತಿವಿರುದ್ಧ ಗೆದ್ದು ಮಂತ್ರಿ ಕೂಡ ಆಗಿದ್ದೆ. 243 ಕೋಟಿ ರೂಪಾಯಿ ಹಣ ಬಿಡುಗಡೆ ಸುವರ್ಣ ವಿಧಾನಸೌಧ ನಿರ್ಮಾಣ ಮಾಡಿದ್ದೇನೆ. ಅನೇಕ ನೀರಾವರಿ



ಯೋಜನೆ ಸೌಲಭ್ಯ ಮಾಡಿದ್ದೇನೆ ಎಂದರು.

ಉಮೇಶ್ ಕತ್ತಿ ಬಿಜೆಪಿಗೆ ಪಕ್ಷಕ್ಕೆ ಬಂದ ಕೂಡಲೇ ನನಗೆ ಎಂಎಲ್ಸಿ ಥಾನ ಕೊಟ್ಟರು.

ಕೇವಲ 11 ತಿಂಗಳು ಮಾತ್ರ ಎಂಎಲ್ಸಿ ಮಾಡಿದ್ರು. ಬಳಿಕ ಪೂರ್ಣ ಪ್ರಮಾಣದ ಎಂ–ಎಲ್ಸಿ ಮಾಡೋ ಭರವಸೆ ಹುಸಿ ಆಯಿತು.

ಈ ಸಲ ಚುನಾವಣೆಯಲ್ಲಿ ನನಗೆ ಟಿಕೆಟ್ ಸಿಗೋ ನಿರೀಕ್ಷೆ ಇತ್ತು. ಆದರೆ ಹುಕ್ಕೇರಿ ಕ್ಷೇತ್ರದ ಟಿಕೆಟ್ ನಿಖಿಲ್ ಕತ್ತಿಗೆ ನೀಡಲಾಗಿದೆ. ಕುಟುಂಬದ ರಾಜಕಾರಣವನ್ನು ಬಿಜೆಪಿ ವಿರೋಧ ಮಾಡುತ್ತದೆ ಅಂತಾರೆ. ಆದರೆ ಒಂದೇ ಮನೆಯಲ್ಲಿ ಇಬ್ಬರಿಗೆ ಟಿಕೆಟ್ ಸಿಕ್ಕಿರುವುದು ವಿಪರ್ಯಾಸ. ಒಂದೇ ಮನೆಯಲ್ಲಿ ಎರಡು ಟಿಕೆಟ್ ಕೊಟ್ಟಿದ್ದಕ್ಕೆ ಶಶಿಕಾಂತ್ ನಾಯ್ಕ್ ಅಸಮಾಧಾನ ವ್ಯಕ್ತಪಡಿಸಿದರು.

ಕತ್ತಿ ಕುಟುಂಬದಿಂದ ಅನೇಕ ಕಿರುಕುಳ ಕೊಟ್ಟಿದ್ದಾರೆ ಎಂದು ಆರೋಪಿಸಿದ ಶಶಿಕಾಂತ್ ನಾಯ್ಕ್, ಪಕ್ಷ ನನಗೆ ಯಮಕನಮರಡಿ ಮತ್ತು ಬೆಳಗಾವಿ ಗ್ರಾಮೀಣ ಕ್ಷೇತ್ರದ ಚುನಾವಣೆಯ ಉಸ್ತುವಾರಿ ಕೊಟ್ಟಿದೆ. ಅದೆಲ್ಲ ಸ್ಥಾನಕ್ಕೂ ನಾನು ರಾಜೀನಾಮೆ ಕೊಡಲು ತೀರ್ಮಾನಿಸಿದ್ದೇನೆ. ನನ್ನ ಅವಶ್ಯಕತೆ ಪಕ್ಷಕ್ಕೆ ಇಲ್ಲ ಎಂದು ಅನಿಸುತ್ತದೆ.

ಬಿಜೆಪಿಯ ಎಲ್ಲ ಜವಾಬ್ದಾರಿಗೆ ರಾಜೀನಾಮೆ ನೀಡುತ್ತೇನೆ. ರೈತ ಮುಖಂಡರು, ಕಾರ್ಯಕರ್ತರ ಜೊತೆಗೆ ಚರ್ಚಿಸಿ ಮುಂದಿನ ತೀರ್ಮಾನ ಮಾಡುತ್ತೇನೆ. ನಾಳೆ ಬೆಂಗಳೂರಿಗೆ ಹೋಗಿ ಬಿಜೆಪಿ ಪ್ರಾಥಮಿಕ ಸದಸ್ಯತ್ವ ಸ್ಥಾನಕ್ಕೆ ರಾಜೀನಾಮೆ ಕೊಡಲು ನಿರ್ಣಯ ಮಾಡಿದ್ದೇನೆ ಎಂದರು.

# ಅಂಬೇಡ್ಕರ್‌ರ 132ನೇ ಜಯಂತಿ ಆಚರಣೆ



ಮುಗಳಖೋಡ: ಪಟ್ಟಣದ ಶ್ರೀ ಚನ್ನಬಸವೇಶ್ವರ ವಿದ್ಯಾವರ್ಧಕ ಸಂಘದ ಡಾ. ಸಿ. ಬಿ. ಕುಲಿಗೋಡ ಪದವಿ ಮಹಾವಿದ್ಯಾಲಯ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ ಬಿ.ಆರ್.ಅಂಬೇಡ್ಕರರವರ 132ನೇ ಜಯಂತೋತ್ಸವವನ್ನು ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಪ್ರಾಚಾರ್ಯರಾದ ಪ್ರೊ. ಪ್ರಕಾಶ ಚ. ಕಂಬಾರ ಅಂಬೇಡ್ಕರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರೊ. ಆರ್.ಎಸ್.ಶೇಗುಣಸಿ, ಡಾ. ಪಿ.ಬಿ.ಕೊರವಿ, ಎಸ್.ಎ.ಹಿರೇಮಠ, ಹೈಸ್ಕೂಲ್ ವಿಭಾಗದ ಮುಖ್ಯೋಪಾಧ್ಯಾಯರಾದ ಎಸ್.ಎಸ್.ಮಧಾಳೆ, ಎಸ್. ಎಂ.ತಮದಡ್ಡಿ ಮುಂತಾದವರು ಭಾಗವಹಿಸಿದ್ದರು.

ಅದರಂತೆ ಚವಿವ ಸಂಘದ ಅಂಗ ಸಂಸ್ಥೆಗಳಾದ ಬ.ನೀ. ಕುಲಿಗೋಡ ಪ್ರೌಢಶಾಲೆ, ಪಿ.ಯು.ಸಿ ವಿಭಾಗ, ಬಾ.ಸಿ.ಮಠಪತಿ ಪ್ರಾಥಮಿಕ ಶಾಲೆ, ರೈನಬೋ ಸೆಂಟ್ರಲ್ (ಸಿ.ಬಿ.ಎಸ್.ಇ) ಸ್ಕೂಲ್ ಹಾಗೂ ಐ.ಟಿ.ಐ ವಿಭಾಗದಲ್ಲಿ ಸಹ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಜಯಂತಿಯನ್ನು ಆಚರಿಸಲಾಯಿತು.

# ಬಿಜೆಪಿ ಶಾಸಕ ಎಂಪಿ ಕುಮಾರಸ್ವಾಮಿ ರಾಜೀನಾಮೆ

ಕಾರವಾರ: ಮೂಡಿಗೆರೆ ಬಿಜೆಪಿ ಶಾಸಕ ಎಂಪಿ ಕುಮಾರಸ್ವಾಮಿ ಅವರು ಶಾಸಕ ಸ್ಥಾನಕ್ಕೆ ಶುಕ್ರವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಎಂಪಿ ಕುಮಾರಸ್ವಾಮಿ ಅವರು ಉತ್ತರ ಕನ್ನಡ ಜಿಲ್ಲೆಯ ಶಿರಸಿಗೆ ಆಗಮಿಸಿದ್ದು, ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ಬುಧವಾರ ರಾತ್ರಿ ಬಿಜೆಪಿ ತನ್ನ ಅಭ್ಯರ್ಥಿಗಳ 2ನೇ ಪಟ್ಟಿ ಬಿಡುಗಡೆ ಮಾಡಿತ್ತು. ಆದ–’ರೆ ಪಟ್ಟಿಯಲ್ಲಿ ಮೂಡಿಗೆರೆಯ ಹಾಲಿ ಶಾಸಕರ ಹೆಸರು ಇರಲಿಲ್ಲ. ಕುಮಾರಸ್ವಾಮಿ ಬದಲಿಗೆ ಬಿಜೆಪಿ ದೀಪಕ್ ದೊಡ್ಡಯ್ಯ ಅವರಿಗೆ ಈ ಬಾರಿ ಅವಕಾಶ ನೀಡಿದೆ. ಇದ–



ರಿಂದ ಪಕ್ಷ ಹಾಗೂ ನಾಯಕರ ವಿರುದ್ಧ ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಕುಮಾರಸ್ವಾಮಿ, ಬಿಜೆಪಿ ಪಕ್ಷದಲ್ಲಿ ನನ್ನನ್ನು ಹುಚ್ಚು ನಾಯಿ ಓಡಿಸಿದ ರೀತಿ ಪಕ್ಷದಿಂದ ಓಡಿಸಿದ್ದಾರೆ. ಇದಕ್ಕೆಲ್ಲಾ ಸಿಟಿ ರವಿ ಹಾಗೂ ಪ್ರಾಣೇಶ್ ಕಾರಣ. ಪಕ್ಷದಲ್ಲಿ ಹೀನಾಯವಾಗಿ ನನ್ನನ್ನು ನಡೆಸಿಕೊಂಡಿದ್ದಾರೆ. ಅವರೇ ಜನ ಕಳುಹಿಸಿ, ಅವರೇ ಜಗಳ ಮಾಡಿಸಿ ನನ್ನ ಮೇಲೆ ಕೆಟ್ಟ ಅಭಿಪ್ರಾಯ ಬರುವ ರೀತಿ ಮಾಡಿದರು ಎಂದು ನೋವು ತೋಡಿಕೊಂಡಿದ್ದಾರೆ. ಅವರು ಪಕ್ಷ ಉಳಿಸಲ್ಲ. ಸಿಟಿ ರವಿ ಬಿಜೆಪಿಗೆ ಮಾರಕ. ಮುಂದಿನ ಬಾರಿ ಜನರೇ ಅವರಿಗೆ ತಕ್ಕ ಪಾಠ ಕಲಿಸುತ್ತಾರೆ. ನನಗೆ ಇನ್ನೂ ವಯಸ್ಸಾಗಿಲ್ಲ, ನಾನು ಚುನಾವಣೆಗೆ ಸ್ಪರ್ಧಿಸುತ್ತೇನೆ. ಪಕ್ಷದಿಂದಲೇ ಸ್ಪರ್ಧೆ ಮಾಡುತ್ತೇನೆ. ಶನಿವಾರ ಸಂಜೆ ವೇಳೆಗೆ ತೀರ್ಮಾನ ಮಾಡುತ್ತೇನೆ ಎಂದು ತಿಳಿಸಿದ್ದಾರೆ.

# ಜೆಡಿಎಸ್ ಸೇರಿದ ಯುವಕರು, ಮುಖಂಡರು

ಬೀದರ್: ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಮಲ್ಕಾಪೂರ, ಬರಿದಾಬಾದ್, ಬೋರಾಳ, ಕಮಠಾಣಾ, ಗೌಸಪೂರ, ಯದಲಾಪೂರ, ಮೀರಜ್ ಕಾಲೋನಿ, ಸಿರ್ಸಿ ಎ, ಶಮಶೀರನಗರ, ನಿರ್ಣಾ, ಮಗದಲ್, ರೇಕುಳಗಿ, ಯದಲಾಪೂರ, ಮನ್ನಳ್ಳಿ, ಮನ್ನಾಎಖೇಳ್ಳಿ, ಖಾಶೆಂಪುರ್ ಸಿ, ಬೇಮಳಖೇಡ ಸೇ–ರಿದಂತೆ ಸುಮಾರು 17ಕ್ಕೂ ಹೆಚ್ಚು ಗ್ರಾಮಗಳ ಕಾಂಗ್ರೆಸ್, ಬಿಜೆಪಿ ಪಕ್ಷಗಳ ಯುವಕರು, ಮಹಿಳೆಯರು, ಮುಖಂಡರು ನೂರಾರು ಸಂಖ್ಯೆಯಲ್ಲಿ ಮಾಜಿ ಸಚಿವರು, ಜೆಡಿ–ಎಸ್ ಶಾಸಕಾಂಗ ಪಕ್ಷದ ಉಪನಾಯಕರು, ಜೆಡಿಎಸ್ ಕೋರ್ ಕಮಿಟಿಯ ಅಧ್ಯಕ್ಷರು, ಕ್ಷೇತ್ರದ ಶಾಸಕರಾಗಿರುವ ಬಂಡೆಪ್ಪ ಖಾಶೆಂಪುರ್ ರವರ ಸಮ್ಮುಖದಲ್ಲಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು.

ಬೀದರ್ ದಕ್ಷಿಣ ಕ್ಷೇತ್ರದ ಖಾಶೆಂಪುರ್ ಪಿ ಗ್ರಾಮದ ಹೊರವಲಯದಲ್ಲಿರುವ ತಮ್ಮ ನಿವಾಸದ ಆವರಣದಲ್ಲಿ



ಸುಮಾರು 17ಕ್ಕೂ ಹೆಚ್ಚು ಗ್ರಾಮಗಳ ನೂರಾರು ಜನ ಯುವಕರು, ಮುಖಂಡ–ರಿಗೆ ಶುಕ್ರವಾರ ಜೆಡಿಎಸ್ ಶಾಲು ಹೊದಿಸಿ, ಪಕ್ಷದ ಧ್ವಜ ನೀಡುವ ಮೂಲಕ ಶಾಸಕ ಬಂಡೆಪ್ಪ ಖಾಶೆಂಪುರ್ ರವರು ಜೆಡಿಎಸ್ ಪಕ್ಷಕ್ಕೆ ಬರಮಾಡಿಕೊಂಡರು.

ಈ ವೇಳೆ ಮಾತನಾಡಿದ ಶಾಸಕ ಬಂಡೆಪ್ಪ ಖಾಶೆಂಪುರ್ ರವರು, ಜೆಡಿಎಸ್ ಪಕ್ಷದ ತತ್ವಸಿದ್ಧಾಂತಗಳನ್ನು ಮೆಚ್ಚಿ ಪ್ರತಿನಿತ್ಯ ಸಾವಿರಾರು ಜನರು ಜಾತ್ಯಾತೀತ ಜನತಾದಳ (ಜೆಡಿಎಸ್) ಪಕ್ಷಕ್ಕೆ ಸೇರ್ಪಡೆ ಯಾಗುತ್ತಿದ್ದಾರೆ.

ಅವರೆಲ್ಲರೂ ನಮ್ಮ ಪಕ್ಷದ ಸಂಘಟನೆಯಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಈ ಮೂಲಕ ಪಕ್ಷ ಸಂಘಟನೆ, ಬಲವರ್ಧನೆ ಯಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಬೀದರ್ ದಕ್ಷಿಣ ಕ್ಷೇತ್ರದ ಮಲ್ಕಾಪೂರ, ಬರಿದಾಬಾದ್, ಬೋರಾಳ, ಕಮಠಾಣಾ, ಗೌಸಪೂರ, ಯದಲಾಪೂರ, ಮೀರಜ್ ಕಾಲೋನಿ, ಸಿರ್ಸಿ ಎ, ಶಮಶೀರನಗರ, ನಿರ್ಣಾ, ಮಗದಲ್, ರೇಕುಳಗಿ, ಯದಲಾಪೂರ, ಮನ್ನಳ್ಳಿ, ಮನ್ನಾಎಖೇಳ್ಳಿ, ಖಾಶೆಂಪುರ್ ಸಿ, ಬೇಮಳಖೇಡ ಗ್ರಾಮಗಳ ಮುಖಂಡರು, ಕಾರ್ಯಕರ್ತರು ನೂತನವಾಗಿ ಜೆಡಿಎಸ್ ಸೇರಿದ ಗ್ರಾಮ ಪಂಚಾಯತಿ ಸದಸ್ಯರು, ಮುಖಂಡರು, ಮಹಿಳೆಯರು, ಕಾರ್ಯಕರ್ತರು ಸೇರಿದಂತೆ ಅನೇಕರಿದ್ದರು.

# ಡಾ. ಬಿ.ಆರ್ ಅಂಬೇಡ್ಕರ್ ಬದುಕು ಎಲ್ಲರಿಗೂ ಸ್ಫೂರ್ತಿ: ಸತೀಶ್ ಜಾರಕಿಹೊಳಿ

ಬೆಳಗಾವಿ: ಸರ್ವ ಜನಾಂಗದ ಅಭಿವೃದ್ಧಿಗೆ ಇಡೀ ಜೀವನವನ್ನು ಮುಡಿಪಾಗಿಟ್ಟಿದ್ದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬದುಕೇ ಎಲ್ಲರಿಗೂ ಸ್ಫೂರ್ತಿ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ನಗರದ ಅಂಬೇಡ್ಕರ್ ಉದ್ಯಾನ ವನದಲ್ಲಿ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 132ನೇ ಜಯಂತಿ ನಿಮಿತ್ತ ಡಾ.ಬಿ.ಆರ್. ಅಂಬೇಡ್ಕರ್ ಉದ್ಯಾನವನದಲ್ಲಿರುವ ಡಾ. ಬಾಬಾ ಸಾಹೇಬ್ ಅವರ ಪುತ್ಥಳಿಗೆ ಗೌರವ ನಮನಗಳನ್ನು ಸಲ್ಲಿಸಿ ಮಾತನಾಡಿದರು.

ಪ್ರತಿ ನಾಗರಿಕನೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಋಣಿಯಾಗಿರಬೇಕು.

ಪ್ರತಿಯೊಬ್ಬ ಭಾರತದ ನಾಗರಿಕನೂ ಅವರ ವಿಚಾರಧಾರೆಯನ್ನು ಅನುಷ್ಠಾನ ಮಾಡುವ



ಮೂಲಕ ಅಂಬೇಡ್ಕರ್ ಅವರನ್ನು ಸದಾಕಾಲ ಹೃದಯಮಂದಿರದಲ್ಲಿಟ್ಟುಕೊಂಡಾಗ ಋಣ ತೀ–ರಿಸಿದಂತಾಗುತ್ತದೆ. ದಲಿತ ಸಮಾಜಕ್ಕೆ ಇಂದಿಗೂ ಪೂರ್ಣಪ್ರಮಾಣದ ನ್ಯಾಯ ದೊರೆತಿಲ್ಲ.

ರಾಜಕೀಯವಾಗಿ ಸಾಮಾಜಿಕವಾಗಿ ಅಂಬೇಡ್ಕರ್ ಅವರು ತೋರಿದ ಬದ್ಧತೆಯ ಕೊರತೆ ಅಸಮಾನತೆ ಮುಂದುವರೆಯಲು ಕಾರಣ. ನಮಗೆ ರಾಜಕೀಯ, ಸ್ವಾತಂತ್ರ್ಯ ದೊರಕಿದೆ.

ಆದರೆ, ಶೈಕ್ಷಣಿಕ ಹಾಗೂ ಆರ್ಥಿಕ ಸ್ವತಂತ್ರ ದೊರಕುವವರೆಗೂ ನ್ಯಾಯ ಸಿಗುವುದಿಲ್ಲ. ಶಿಕ್ಷಣ, ಉದ್ಯೋಗ ಹಾಗೂ ಸಬಲೀಕರಣದ ಸಾಧನೆಯನ್ನು ಸಮಾಜ ಸರ್ಕಾರ ಎರಡೂ ಮಾಡಬೇಕಿದೆ ಎಂದರು.

ಇದೇ ವೇಳೆ ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ್ ಜಾರಕಿಹೊಳಿ ಅವರು ಅಂಬೇಡ್ಕರ್ ಉದ್ಯಾನ ವನದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಅವರ ಪುಸ್ತಕ ಪ್ರದರ್ಶನವನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಮುಖಂಡರು ಇದ್ದರು.

# ಡಾ. ಬಿ.ಆರ್. ಅಂಬೇಡ್ಕರ ಜಯಂತಿ ಆಚರಣೆ

ಬೆಳಗಾವಿ: ಜ್ಞಾನವೇ ಶಕ್ತಿ ಎಂದು ನಂಬಿದಡಾ. ಬಿ.ಆರ್. ಅಂಬೇಡ್ಕರಅವರ ತತ್ವಾದರ್ಶಗಳು ಇಂದಿಗೂ ಪ್ರಸ್ತುತ. ಅವರಜ್ಞಾನ ಹಾಗೂ ಆದರ್ಶಗಳನ್ನು ಇಂದಿನ ಯುವಜನಾಂಗ ಅರಿತು ಕೊಂಡು ಮುನ್ನಡೆಯ ಬೇಕೆಂದು ಅಂಗಡಿ ತಾಂತ್ರಿಕ ಮತ್ತು ವ್ಯವಸ್ಥಾಪನಾ ಮಹಾ ವಿದ್ಯಾಲಯದ ಪ್ರಾಚಾರ್ಯ ಡಾ. ಆನಂದದೇಶಪಾಂಡೆ ಹೇಳಿದರು.

ನಗರದ ಅಂಗಡಿ ತಾಂತ್ರಿಕ ಮತ್ತು ವ್ಯವಸ್ಥಾಪನಾ ಮಹಾವಿದ್ಯಾಲಯದಲ್ಲಿ ಶುಕ್ರವಾರ ಸಂವಿಧಾನ ಶಿಲ್ಪಿ, ಭಾರತರತ್ನಡಾ. ಬಿ.ಆರ್. ಅಂಬೇಡ್ಕರರವರ 132ನೇ ಜಯಂತಿಯ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಅಂಬೇಡ್ಕರರವರ ಭಾವಚಿತ್ರಕ್ಕೆ ಪುಷ್ಪಗೌರವಗಳನ್ನು ಸಲ್ಲಿಸಿ



ಮಾತನಾಡಿದರು.

ಜೀವನದುದ್ದಕ್ಕೂ ಅನ್ಯಾಯ, ಅಧರ್ಮ, ಅಸ್ಪೃಶ್ಯತೆ, ಶೋಷಣೆ, ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡಿದಡಾ. ಬಿ.ಆರ್. ಅಂಬೇಡ್ಕರ ಅವರ ಸಾಮಾಜಿಕ ಆದರ್ಶಗಳಾದ ಸ್ವಾತಂತ್ರ್ಯ, ಸಮಾನತೆ, ಮಾನವೀಯತೆ ಮತ್ತು ಭ್ರಾತೃತ್ವದ ಭಾವನೆಗಳನ್ನು ನಾವೆಲ್ಲರೂ ನಮ್ಮಜೀವನದ ತತ್ವಗಳನ್ನಾಗಿ ಅಳವಡಿಸಿಕೊಂಡು ದೇಶದ ಅಭಿವೃದ್ಧಿಯಲ್ಲಿ ಕೈಜೋಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು.

ಡಾ. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ಭಾರತಕ್ಕಲ್ಲದೆಇಡೀ ವಿಶ್ವಕ್ಕೆ ಪ್ರಜಾ ಪ್ರಭುತ್ವವನ್ನು ಅರ್ಥೈಸುವ ಸಾಮಥ–್ರ್ಯ ಹೊಂದಿದೆ. ಅಂಬೇಡ್ಕರ್‌ಅವರು ಸಂವಿಧಾನ ರಚನೆಗೆ ಪಟ್ಟ ಶ್ರಮ ಹಾಗೂ ಮುತುವರ್ಜಿಯನ್ನು ಸ್ಮರಿಸಬೇಕೆಂದು ಹೇಳಿದರು.

ಪ್ರೊ. ಎಂ.ವಿ. ಕಂಠಿ, ಪ್ರೊ. ಗುರುರಾಜ–ತಾವಿಲ್ದಾರ, ಪ್ರೊ. ಸಾಗರ ಬಿರ್ಜೆ, ಪ್ರೊ. ಅರವಿಂದಜಾಧವ, ದೈಹಿಕ ನಿರ್ದೇಶಕ ವಿಶಾಂತಥ ಮೋಣೆ, ಗಿರೀಶ ಮಡ್ಡಿಮನಿ, ತೇಜಸ್ವಿನಿ ಸೊಬರದ, ವಿಭಾಗಗಳ ಮುಖ್ಯಸ್ಥರು, ಶಿಕ್ಷಕರು, ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರೊ. ಸಾಗರರ ಬಿರ್ಜೆ ವಂದಿಸಿದರು.

# ಮಲ್ಲೂರಿನಲ್ಲಿ ನೂತನ ಬಸವೇಶ್ವರ ದೇವಸ್ಥಾನ ಉದ್ಘಾಟಣೆ

ಬೈಲಹೊಂಗಲ: ಸಮೀಪದ ಸುಕ್ಷೇತ್ರ ಮಲ್ಲೂರ ಗ್ರಾಮದಲ್ಲಿ ಸುಮಾರು 1 ಕೋಟಿ ವೆಚ್ಚದಲ್ಲಿ ನಿರ್ಮಾಣವಾದ ನೂತನ ಶ್ರೀ ಬಸವೇಶ್ವರ ದೇವಸ್ಥಾನದ ಉದ್ಘಾಟನೆಯನ್ನು ಯಕ್ಕುಂಡಿಂ–ಮ ಶ್ರೀ ಕುಮಾರೇಶ್ವರ ಸಂಸ್ಥಾನ ಹಿರೇಮಠದ ಪೂಜ್ಯ ಪಂಚಾಕ್ಷರ ಸ್ವಾಮೀಜಿ ಅವರು ಶುಕ್ರವಾರ ನೆರವೇರಿಸಿದರು.

ಮಲ್ಲೂರಿನ ತವಗಮಠದ ಬ್ರಹ್ಮಶ್ರೀ ಮಹಾಬಾಳಯ್ಯ ಸ್ವಾಮೀಜಿ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಬೂದಿಹಾಳದ ವಾಸ್ತು ತಜ್ಞರಾದ



ವೇ.ಮೂ. ಸಿ.ಜಿ.ಮಠದ ಅವ–ರಿಂದ ದೇವಸ್ಥಾನದ ವಾಸ್ತುಶಾಂತಿ, ಹಣಬರಹಟ್ಟಿಯ ಪಟ್ಟದದೇವರು ಮಠದ ಪೂಜ್ಯ ಬಸವಲಿಂಗ ಶಿವಾಚಾರ್ಯರು ಅವರಿಂದ ಈಶ್ವರ, ನಂದಿ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ, ಶ್ರೀ ವೀರಭದ್ರೇಶ್ವರಿಗೆ ರುದ್ರಾಭಿಷೇಕ ಮಹಾಪೂಜೆ, ಸಹಸ್ರ ಮಂತ್ರ ಪಠಣ ನಡೆದವು. ಸಾಯಂಕಾಲ ದೇವಸ್ಥಾನದ ಕಳಸಾರೋಹನ ಜರುಗಿತು.

ಶ್ರೀ ಬಸವೇಶ್ವರ ಸೇವಾ ಸಮೀತಿಯ ಅಧ್ಯಕ್ಷ ಗಂಗಪ್ಪ ಪಠಾಣಿ, ಉಪಾಧ್ಯಕ್ಷ ಮಲ್ಲನಗೌಡಾ ಪಾಟೀಲ, ಖಜಾಂಚಿ ಶಿವಪುತ್ರಪ್ಪ ಮುರಗೋಡ, ಕಾರ್ಯದರ್ಶಿ ಹಂಪಯ್ಯ ಕಿತ್ತೂರು, ಸದಸ್ಯ ಬಸಲಿಂಗಪ್ಪ ನಾಗನೂರು, ಶಂಕರಗೌಡಾ ಪಾಟೀಲ, ಮಹಾದೇವಪ್ಪ ಪ್ರಭುನವರ, ಈರನ ಗೌಡಾ ಪಾಟೀಲ, ನಿಂಗನ ಗೌಡಾ ಪಾಟೀಲ, ರುದ್ರಗೌಡಾ ಪಾಟೀಲ, ಮಹಾಂತೇಶ ದೇಸಾಯಿ, ಸೋಮನಗೌಡಾ ಪಾಟೀಲ, ದೇಮಪ್ಪ ನಂದಿಹಳ್ಳಿ, ಸೇರಿದಂತೆ ಸೇವಾ ಸಮೀತಿಯ ಸದಸ್ಯರು ಉಪಸ್ಥಿತರಿದ್ದರು.

# ಮಹಿಳೆಯರಿಗೆ ಮತದಾನದ ಹಕ್ಕು ಕೊಟ್ಟಿದ್ದು ಡಾ. ಬಿ ಆರ್ ಅಂಬೇಡ್ಕರ್: ಡಾ .ಬಿಂದು

ಗುಡಿಬಂಡೆ: ದೇಶದಲ್ಲಿ ಮಹಿಳೆಯ–ರಿಗೆ ಮತದಾನ ಮಾಡುವಂತಹ ಹಕ್ಕು ಇಲ್ಲದೇ, ಭಾರತದ ಪ್ರಜೆ ಎಂದು ಸಹ ಕಾಣದ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಮತದಾನದ ಹಕ್ಕನ್ನು ಕೊಟ್ಟಿದ್ದು ಡಾ .ಬಿ ಆರ್ ಅಂಬೇಡ್ಕರ್ ರವರು ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಣ ಅಧಿಕಾರಿ ಡಾ .ಬಿಂದು ಹೇಳಿದರು.

ಪಟ್ಟಣದಲ್ಲಿ ಇರುವಂತಹ ತಾಲೂಕು ಕಛೇರಿಯ ಸಂಭಾಂಗಣದಲ್ಲಿ ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಡಾ .ಬಿ ಆರ್ ಅಂಬೇಡ್ಕರ್ ರವರ 132 ನೇ ಜಯಂತಿಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಮಹಿಳೆಯನ್ನು ಮನುಷ್ಯ ಎಂದು ಸಹ ಕಾಣದ ವ್ಯವಸ್ಥೆಯಲ್ಲಿ ಮಹಿಳೆಯರ ವಿಮೋಚನೆಯನ್ನು ಮಾಡಿ ಅವರನ್ನು ಮನುಷ್ಯರು ಎಂದು ಕಾಣುವಂತೆ ಮಾಡಿದ್ದರು.

ರಾಜ ಮಹಾರಾಜರು ದೊಡ್ಡ ಬಂಡವಾಳಗಾರರು ಮಾತ್ರ ಈ ದೇಶದಲ್ಲಿ ಮತವನ್ನು ಚಲಾಯಿಸುವಂತಹ ಹಕ್ಕು ಇತ್ತು ಅಂತಹ ಸಮಯದಲ್ಲಿ ದೇಶಕ್ಕೆ ಲಿಖಿತ ಸಂವಿಧಾನದ ಮೂಲಕ



ದೇಶದಲ್ಲಿ ಮಹಿಳೆಯರು ಮತದಾನ ಮಾಡುವಂತಹ ಹಕ್ಕು ಕೊಟ್ಟು ಮಹಿಳೆಯರನ್ನು ಗುರುತಿಸಿ ಸಮಾಜದ ಮುಖ್ಯವಾಹಿನಿಗೆ ತಂದರು ಎಂದು ಹೇಳಿದರು.

ನಂತರ ತಹಶೀಲ್ದಾರ್ ಮನೀಶ್ ಎನ್ ರವರು ಮಾತನಾಡಿ ದೇಶದಕ್ಕೆ ಸಂವಿಧಾನ ಬಂದ ನಂತರ ಮೀಸಲಾತಿಯು ಜಾರಿಗೆ ಬಂದು ಆಗಿನಿಂದ ಈಗಿನ ವರಗೆ ಸ್ವಲ್ಪ ಜನ ಅಭಿವೃದ್ಧಿ ಕಾಣಲು ಸಾದ್ಯವಾಯಿತ್ತು . ಬೇರೆಯವರಿಗೆ ಸಿಗುವಂತಹ ಸೌಲಭ್ಯಗಳಗಿಂತ ನಿಮಗೆ ಹೆಚ್ಚು ಸೌಲಭ್ಯಗಳು ಸಿಗುತ್ತೀವೆ.

ಅವುಗಳನ್ನು ಬಳಸಿಕೊಂಡು ನಿಮ್ಮ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ ಎಂದು ತಿಳಿಸಿದರು.

ವಿಧಾನ ಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿ ಇರುವ ಕಾರಣ ಸರಳವಾಗಿ ಅರ್ಥಪೂರ್ಣವಾಗಿ ಜಯಂತಿಯನ್ನು ಆಚರಣೆ ಮಾಡಿದರು.

ಮೊದಲಿಗೆ ಅಂಬೇಡ್ಕರ್ ರವರ ಪುತ್ಥಳಿಗೆ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ದಲಿತ ಸಂಘಟನೆಗಳ ಮುಖಂಡರು ಮಾಲಾರ್ಪಣೆ ಪುಷ್ಪ ನಮನ ಮಾಡಿ ನಂತರ ವೇದಿಕೆ ಕಾರ್ಯಕ್ರಮವನ್ನು ನಡೆಸಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಜಯಣ್ಣ, ಬಿಸಿಎಂ ಇಲಾಖೆ ರಾಮಯ್ಯ, ಬಿಇಒ ಮುನೇಗೌಡ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಭಾ ಶರೀನಾ, ಸ ನಾ ನಾಗೇದ್ರ, ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಕೃಷ್ಣಪ್ಪ , ಡಾ, ನರಸಿಂಹಮೂರ್ತಿ, ದಾಸಪ್ಪ, ಶ್ರೀರಾಮಪ್ಪ, ಎಸ್ಸಿ ಎಸ್ಟಿ ನೌಕರರ ಸಂಘದ ಅಧ್ಯಕ್ಷ ಅಂಜನೇಯಲು, ದಲಿತ ಸಂಘಟನೆಗಳ ಮುಖಂಡರಾದ ಈಶ್ವರಪ್ಪ, ಚಲಪತಿ, ವೆಂಕಟರಮಣ, ಇಸ್ಕೂಲಪ್ಪ, ಎಂ ಸಿ ಚಿಕ್ಕನರಸಿಂಹಪ್ಪ, ವರ್ಲಕೊಂಡ ರಾಜು, ನರಸಿಂಹಪ್ಪ, ನಾರಾಯಣಸ್ವಾಮಿ, ಚನ್ನರಾಯಪ್ಪ ಸೇರಿದ್ದಂತೆ ಇನ್ನೀತರರು ಉಪಸ್ಥಿತ–ರಿದ್ದರು.

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.

Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089